

# ಸಿಹಿ ಕಹಿ

SK NEWS ಕನ್ನಡ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING


BAGALKOT

Volume : 07 Issue : 226 Saturday 17-05-2025 E-mail : maruti.b.hosamani76@gmail.com Page: 4 Price : Rs. 1/-


## ಭ್ರಷ್ಟ ಅಧಿಕಾರಿಗೆ ಕಟ್ಟುನಿಟ್ಟಾದ ಕ್ರಮ ಕೈಗೊಂಡಿರುವುದಕ್ಕೆ- ಸಾರ್ವಜನಿಕರಿಂದ ಇಲಾಖಾ ಆಯುಕ್ತರಿಗೆ ಮೆಚ್ಚುಗೆ ವ್ಯಕ್ತ



ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾದ ಶಾಂತಮ್ಮ ಏನಮ್ಮ ನಿನ್ನ ಲೀಲೆ.....



**ಸಿಹಿ ಕಹಿ ಸುದ್ದಿ,**

**ಕೊಟ್ಟೂರು :** ಪಟ್ಟಣದ ಶ್ರೀ ಗುರುಬಸವೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಈ ಹಿಂದೆ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದ ಶಾಂತಮ್ಮ ಇವರಿಗೆ ಇಲಾಖೆಯು 184804 ರೂಪಾಯಿಗಳ ದಂಡ ವಿಧಿಸಿದೆ. ಇವರು ಈ ಹಿಂದೆ ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಈ ದಂಡವನ್ನು ವಿಧಿಸಿದೆ. ಆದೇಶ ಸಂಖ್ಯೆ 1544464 ಶ್ರೀಗುರುಬಸವೇಶ್ವರ ಸ್ವಾಮಿ ದೇವಾಲಯದ ಖಾತೆಗೆ ಜಮೆ ಮಾಡುವ (ವೇತನ ಬಟವಾಡೆ ವಹಿಯ ಆಧಾರದಲ್ಲಿ ಲೆಕ್ಕಾಚಾರ ಮಾಡುವುದು) ಹಾಗೂ 32 ದಿನಗಳ ವಿಳಂಬವಾಗಿ ದೇವಾಲಯದ ಖಾತೆಗೆ ಜಮೆ ಮಾಡಿರುವ ಮೊಬಲಗು ರೂ. 7,39,218/- ಗಳ ಮೇಲೆ ಶೇಕಡಾ 25% ಬಡ್ಡಿಯಂತೆ ರೂ. 1,84,804/- ಗಳನ್ನು ಅವರ ನಿವೃತ್ತಿ ಉಪದಾನದಲ್ಲಿ ತಡೆ ಹಿಡಿಯುವಂತೆ ಹಿಂದೂ ಧಾರ್ಮಿಕ ದತ್ತಿ ಇಲಾಖೆಯ ಆಯುಕ್ತರು ಆದೇಶ ಹೊರಡಿಸಿದ್ದಾರೆ. ಈ ಹಿಂದೆ ದೇವಸ್ಥಾನದಲ್ಲಿ ಹರಾಜು ಪ್ರಕ್ರಿಯೆಯಲ್ಲಿ ಆದ ಅವ್ಯವಹಾರದ ಬಗ್ಗೆ ಸುದೀರ್ಘ ವರದಿಗಳು ಪ್ರಕಟವಾಗಿದ್ದು, ಅವ್ಯವಹಾರ ಮಾಡಿರುವ ಅಧಿಕಾರಿಗೆ ದಂಡನೆ ವಿಧಿಸಿರುವುದು ಸಾರ್ವಜನಿಕರಿಗೆ ಇಲಾಖೆಯ ಮೇಲೆ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಶಾಂತಮ್ಮ ಇವರು ಈಗಾಗಲೇ ನಿವೃತ್ತರಾಗಿದ್ದು ಕರ್ತವ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ತಹಶೀಲ್ದಾರರಾಗಿ ಬಡ್ತಿಯನ್ನು ಸಹ ಹಿಂಪಡೆದು ಡಿ ಗ್ರೂಪ್ ಗೆ ದಂಡ ವಿಧಿಸಿ ಭ್ರಷ್ಟ ಅಧಿಕಾರಿಗಳ ವಿರುದ್ಧ ಆಯುಕ್ತರಾದ ಎಂ.ವಿ ವೆಂಕಟೇಶ್ ಭಾ.ಆ.ಸೇ. ರವರು ಕಠಿಣ ಕ್ರಮ ಕೈಗೊಂಡು ಇಲಾಖೆಯಲ್ಲಿ ಹೊಸ ಆಯಾಮವನ್ನು ರೂಪಿಸಿದ್ದಾರೆ. ಕಟ್ಟುನಿಟ್ಟಾದ ಕ್ರಮ ಕೈಗೊಂಡಿರುವುದಕ್ಕೆ ಸಾರ್ವಜನಿಕರು ಇಲಾಖಾ ಆಯುಕ್ತರ ಮೇಲೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇಲಾಖೆಗೆ ಧಕ್ಕೆ ಬರದಂತೆ ಒಳ್ಳೆಯ ಆದೇಶ ಹೊರಡಿಸಿದ್ದಾರೆ ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್. ಕುಮಾರ್.ಸಿ.ಕೊಟ್ಟೂರು**

## ತಾಲೂಕ ಪಂಚಾಯತಿ ಇ.ಓ ಖಾಲಿದ್ ಅಹ್ಮದ್‌ರ ಅಂಧಾ ದರ್ಬಾರ್





**ಸಿಹಿ ಕಹಿ ಸುದ್ದಿ,**

**ಗೋರ್ಕಲ್ :** ಸರಕಾರದ ಹಣ ಯಾವ ರೀತಿ ಲೂಟಿ ಮಾಡಬೇಕು ಎಂದು ಮಾನ್ವಿ ತಾಲೂಕಿನ ಗೋರ್ಕಲ್ ಗ್ರಾಮ ಪಂಚಾಯತಿಯಲ್ಲಿ ಕಾಮಗಾರಿ ಮಾಡದೆ ಹಣ ಲೂಟಿ ಮಾಡಿರುವುದು ಬೆಳಕಿಗೆ ಬಂದಿದ್ದು, ಪಿಡಿಓ ಅಕ್ತರ್ ಪಾಶ್ ಗೆ ಹಾಗೂ ತಾಲೂಕ ಪಂಚಾಯತಿ ಇ.ಓ ಖಾಲಿದ್ ಅಹ್ಮದ್ ಸಾಹೇಬ್ರಿಗೆ ಸಾರ್ವಜನಿಕರು ಹಿಡಿಶಾಪ ಹಾಕುತ್ತಿದ್ದಾರೆ.

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಗೋರ್ಕಲ್ ಗ್ರಾಮ ಪಂಚಾಯತಿಯ ಜನರು ಸೌಲಭ್ಯಗಳಿಲ್ಲದೆ ನರಳಾಡುತ್ತಿದ್ದು, ವೆಂಕೋಬನ ಮನೆಯಿಂದ ಕುರಿ ಹನುಂತನ ಮನೆವರೆಗೂ ಚರಂಡಿ ಹಾಗೂ ಸ್ಲ್ಯಾಬ್ ಹಾಕುತ್ತೇವೆಂದು ಲಕ್ಷಾಂತರ ಹಣ ಕಾಮಗಾರಿ ಮಾಡದೆ ಲೂಟಿ ಮಾಡಲಾಗಿದ್ದು. ಸಾರ್ವಜನಿಕರಂತು ಸರಕಾರಕ್ಕೆ ಹಿಡಿಶಾಪ ಹಾಕುತ್ತಿದ್ದಾರೆ.

ಪಿಡಿಓ ಅಕ್ತರ್ ಪಾಶ್ ಅವರ ದುರಾಡಳಿತ ಹಾಗೂ ಮಾನ್ವಿ ತಾಲೂಕ ಪಂಚಾಯತಿ ಇ.ಓ ಖಾಲಿದ್ ಅಹ್ಮದ್ ಅವರ ದುರಾಡಳಿತ ದಿಂದಾಗಿ ಮಾನ್ವಿ ತಾಲೂಕಿನ ಗೋರ್ಕಲ್ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳು ಅಭಿವೃದ್ಧಿ ಯಾಗದೆ ಜನರಂತು ಸೌಲಭ್ಯಗಳಿಂದ ವಂಚಿತರಾಗಿ ಜೀವನ ಕಳೆಯುತ್ತಿದ್ದಾರೆ ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಶ್ರೀ ಕೊಡೆಕಲ್ ಬಸವೇಶ್ವರರ ಅದ್ದೂರಿ - ಪಲ್ಲಕ್ಕಿ ಉತ್ಸವ



**ಸಿಹಿ ಕಹಿ ಸುದ್ದಿ,**

**ಗುಂಡಕರ್ಜಗಿ :** ಮುದ್ದೇಬಿಹಾಳ ತಾಲೂಕಿನ ಗುಂಡಕರ್ಜಗಿ ಗ್ರಾಮದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಶ್ರೀ ಕೊಡೆಕಲ್ ಬಸವೇಶ್ವರಜಾತ್ರಾಮಹೋತ್ಸವವು ಕೊಡೆಕಲ್ ಮಠದ ಬಸಣ್ಣ ಮುತ್ಯಾವರ ಸಾನಿಧ್ಯದಲ್ಲಿ ಮೇ 19 ಮತ್ತು 20 ರಂದು ಎರಡು ದಿನಗಳ ಕಾಲ ಅದ್ದೂರಿಯಾಗಿ ಜಾತ್ರೆ ನಡೆಯುವುದು. ಮೇ 19 ಸೋಮವಾರ ದಂದು ಬೆಳಿಗ್ಗೆ 4 ಗಂಟೆಗೆ ಗಂಗಸ್ಥಳ ದಿಂದ ಬಸವೇಶ್ವರ ದೇವಸ್ಥಾನದ ವರೆಗೆ ಭಕ್ತಾದಿಗಳು ದೀಡ ನಮಸ್ಕಾರ ಹಾಕುವುದರ ಮೂಲಕ ತಮ್ಮ ಹರಕೆಯನ್ನು ಬಸವೇಶ್ವರ ದೇವರಿಗೆ ಮುಟ್ಟಿಸುತ್ತಾರೆ. ಅಂದೆ ಬೆಳಿಗ್ಗೆ 10:00 ಗಂಟೆಗೆ ಊರಿನ ಎಲ್ಲಾ ಭಕ್ತಾದಿಗಳು ಉಪ್ಪಲ ದಿನ್ನಿ ಅವರ ಮನೆಯಿಂದ ಸಕಲ ವಾದ್ಯ ಗಳೊಂದಿಗೆ ಹಾಗೂ ಕೊಡೆಕಲ್ಲ ಬಸಣ್ಣ ಮುತ್ಯಾರವರಿಂದ ಬಸವೇಶ್ವರ ವಚನ ಹೇಳುವುದರ ಮೂಲಕ ಬಸವೇಶ್ವರ ದೇವಸ್ಥಾನಕ್ಕೆ ಪಲ್ಲಕ್ಕಿ ತಲುಪುವುದು. ಅಂದೇ ಮಧ್ಯಾಹ್ನ ಅನ್ನ ಸಂತರ್ಪಣೆ ನಡೆಯುತ್ತದೆ. ಅಂದೆ ರಾತ್ರಿ 10 ಗಂಟೆಗೆ ಶ್ರೀ ಮೈಲಾರಲಿಂಗೇಶ್ವರ ನಾಟ್ಯ ಸಂಘ ಯಂಡಿಗೇರಿ ತಾಲೂಕ್ ಬಾದಾಮಿ ಜಿ. ಬಾಗಲಕೋಟ. ಮಹಾಂತೇಶ್ ಮಳಗಿ ಇವರ ಸಾರಥ್ಯದಲ್ಲಿ ಮಾನವಂತರ ಮಗ ಅರ್ಥಾತ್ (ಸಾಕು ಮಗ ಸರ್ದಾರ್) ಎಂಬ ಕೌಟುಂಬಿಕ ಹಾಸ್ಯಭರಿತ ನಾಟಕ ನಡೆಯುತ್ತದೆ. ಮೇ 20 ಮಂಗಳವಾರ ದಂದು ಬೆಳಿಗ್ಗೆ 11:00 ಗಂಟೆಗೆ ಉಪ್ಪಲ ದಿನ್ನಿ ಅವರ ಮನೆಗೆ ಮರಳಿ ಭಜನೆಗಳ ಮೂಲಕ ಪಲ್ಲಕ್ಕಿ ಹೋಗುತ್ತವೆ. ಎಂದು ಜಾತ್ರಾ ಕಮಿಟಿಯವರು ತಿಳಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಬಸವರಾಜ.ಸಂಕನಾಳ.ಮುದ್ದೇಬಿಹಾಳ**

## ವಿದ್ಯಾರ್ಥಿಗಳಿಗೆ ಭಾಷಾ ಕೌಶಲ್ಯಗಳು ಮುಖ್ಯ: ಡಾ. ಗುಂಡಣ್ಣ ಕಲಬುರ್ಗಿ



**ಮಹಾಲಿಂಗಪುರ :** ವಿದ್ಯಾರ್ಥಿಗಳಿಗೆ ಭಾಷಾ ಕೌಶಲ್ಯಗಳು ಮುಖ್ಯ ಎಂದು ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಶಾಸ್ತ್ರೀಯ ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ. ಗುಂಡಣ್ಣ ಕಲಬುರ್ಗಿ ಹೇಳಿದರು. ಪಟ್ಟಣದ ಕೆ.ಎಲ್.ಇ. ಸಂಸ್ಥೆಯ ಎಸ್ಸಿಪಿ ಪದವಿ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ ಜರುಗಿದ ಕೌಶಲ್ಯಾಭಿವೃದ್ಧಿ ಕಾರ್ಯಾಗಾರದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು ಸೃಜಶೀಲತೆಯನ್ನು ಪಡೆಯುವಲ್ಲಿ ಕೇಳುವಿಕೆ, ಮಾತುಗಾರಿಕೆ, ಓದುವಿಕೆ, ಬರವಣಿಗೆಗಳನ್ನು ಕೌಶಲ್ಯಗಳಾಗಿ ಬಳಸಿಕೊಳ್ಳಬೇಕು.

ಆಲಿಸುವಿಕೆ, ಮಾತುಗಾರಿಕೆ ಇವುಗಳನ್ನು ಬರವಣಿಗೆಯಲ್ಲಿ ಹುಟ್ಟು ಹಾಕಬೇಕು. ಭಾಷೆ ಎಂಬುದು ಮೀಮಾಂಸೆ ನೋಡ ಎಂದ ಅಲ್ಲಮನ ಮಾತನ್ನು ಹೇಳಿದ ಅವರು ಹುಟ್ಟಿದ ಮೇಲೆ ಹೇಗೆ ಬದುಕಬೇಕು ಎನ್ನುವುದು ಕೂಡಾ ಒಂದು ಕೌಶಲ್ಯವಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯರಾದ ಡಾ. ಕೆ. ಎಮ್. ಅವರಾದಿ ಮಾತನಾಡಿ ನಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಎಲ್ಲ ಕ್ಷೇತ್ರದಲ್ಲೂ ಮುಂದೆ ಇದ್ದಾರೆ. ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದಾರೆ. ಇಂತಹ ಕಾರ್ಯಕ್ರಮಗಳು ವಿದ್ಯಾರ್ಥಿಗಳ ಮುಂದಿನ ಭವಿಷ್ಯ ರೂಪಿಸುವಲ್ಲಿ ಸಹಾಯಕಾರಿಯಾಗಲಿದೆ ಎಂದರು.

ಡಾ. ಎಸ್. ಎಸ್. ಕೋಳಿ ಪ್ರಾಸ್ತಾವಿಕವಾಗಿ ಮಾತನಾಡಿ ಜಗತ್ತಿಗೆ ಬೇಕಾಗಿರುವುದು ಕೌಶಲ್ಯ ಆಧಾರಿತ ಶಿಕ್ಷಣ. ಇದನ್ನು ಪ್ರತಿಯೊಬ್ಬ ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು. ಯಶಸ್ವಿ ವಿದ್ಯಾರ್ಥಿಯ ಜೀವನದಲ್ಲಿ ಕೌಶಲ್ಯಗಳು ಪ್ರಮುಖವಾಗಿ ಬೇಕಾಗಿರುತ್ತವೆ ಎಂದರು.

ಡಾ. ಸುನಂದಾ ಸೋರಗಾಂವಿ, ಆಯ್. ಸಿ. ಶಿರೋಳ, ಎಸ್. ಕೆ. ಅಟಗಾಳಿ, ಬಸವರಾಜ ಪಾಗದ, ಜಯಶ್ರೀ ಹೊರಟ್ಟಿ, ರಾಜು ಚೌಗಲಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ನಮ್ಮ ದೇಶದ ಸೈನಿಕರ ತಾಕತ್ತು ಪಾಕಿಗಳಿಗೆ ತಿಳಿಯಲಿ



**ರಬಕವಿ-ಬನಹಟ್ಟಿ :** ಭಾರತ ಹಾಗೂ ಪಾಕಿಸ್ತಾನ ನಡುವೆ ನಡೆಯುತ್ತಿರುವ ಯುದ್ದದಲ್ಲಿ ನಮ್ಮ ಯೋಧರು ಆರೋಗ್ಯವಂತ ಹಾಗೂ ಜಯಶಾಲಿಯಾಗಲಿ ಎಂದು ತೇರದಾಳ ಕ್ಷೇತ್ರದ ಶಾಸಕ ಸಿದ್ದು ಸವದಿ ಹೇಳಿದರು.

ಅವರು ತಾಲೂಕಿನ ನಾವಲಗಿ ಗ್ರಾಮದ ಉದ್ಭವ ಮೂರ್ತಿ ಶ್ರೀ ಮಾರುತೇಶ್ವರ ದೇವಸ್ಥಾನದ ಆವರಣದಲ್ಲಿ ಶನಿವಾರ ಜರುಗಿದ ಹೋಮ ಹವನ ಪೂಜೆಯಲ್ಲಿ ಭಾಗಿಯಾಗಿ ಮಾತನಾಡಿದರು. ನರೇಂದ್ರ ಮೋದಿಯವರ ಆಪರೇಷನ್ ಸಿಂಧೂರ ಮೊದಲ ಹಂತದಲ್ಲಿ ಯಶಸ್ವಿ ಕಂಡಂತೆ ಇದೀಗ ಎರಡನೇಯ ಹಂತದಲ್ಲಿಯೂ ಸಂಪೂರ್ಣ ಯಶಸ್ವಿ ಕಂಡು ಯುದ್ಧ ಗೆದ್ದು ಭಾರತ ಮಾತೆಗೆ ಸಮರ್ಪಿಸಲಿ. ಧರ್ಮ ಕೇಳಿ ಹಿಂದೂ ಪ್ರವಾಸಿಗರನ್ನು ಉಗ್ರರು ಹತ್ಯಗೈದಿದ್ದರು. ಇದಕ್ಕೆ ಪ್ರತ್ಯುತ್ತರವಾಗಿ ಭಾರತೀಯ ಸೇನೆ, ಪಾಕಿಸ್ತಾನದ ಹುಟ್ಟಡಗಿಸುವ ಕಾರ್ಯ ಮಾಡಿದೆ. ನಮ್ಮ ಭಾರತೀಯ ಸೇನೆಗೆ ಜಯವಾಗಲಿ. ನಮ್ಮ ದೇಶದ ಸೈನಿಕರ ತಾಕತ್ತು ಪಾಪಿ ಪಾಕಿಸ್ತಾನಕ್ಕೆ ತಿಳಿಯಲಿ ಎಂದು ಸವದಿ ಹೇಳಿದರು.

ಈ ಸಂದರ್ಭದಲ್ಲಿ ಹಿರಿಯರಾದ ಎಂ. ಆರ್. ವಾಲಿ, ತಾಲೂಕು ಪಂಚಾಯತ್ ಮಾಜಿ ಸದಸ್ಯ ಗುರು ಮರಡಿಮಠ, ಆನಂದ ಕಂಪು, ಹಣಮಂತ ಸವದಿ, ಸದಾಶಿವ ಸವದಿ, ದಾನಪ್ಪ ಆಸಂಗಿ, ವಿಠ್ಠಲ ಜನವಾಡ, ಗಂಗಪ್ಪ ಅಮ್ಮಲಜೇರಿ, ಈರಪ್ಪ ಕಡಕಬಾವಿ, ಸಿದ್ದು ಕಂಚು, ರಾಜು ಕದಂ, ಬಸವರಾಜ ಯಾದವಾಡ, ಬಸಪ್ಪ ಕಂಚು, ಅಶೋಕ ಆಸಂಗಿ, ಸದಾಶಿವ ಬೆಳಗಲಿ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

## ಜೀವನದಲ್ಲಿ ದಾನ ಗುಣವನ್ನು ಬೆಳೆಸಿಕೊಳ್ಳಿ



**ರಬಕವಿ-ಬನಹಟ್ಟಿ :** ಹೇಮರೆಡ್ಡಿ ಮಲ್ಲಮ್ಮ ಮಹಾನ್ ಭಕ್ತೆ ಮತ್ತು ಸಾಧ್ವಿ. ಶ್ರೀ ಶೈಲ ಮಲ್ಲಿಕಾರ್ಜುನನನ್ನು ತನ್ನ ಆರಾಧ್ಯ ದೈವವಾಗಿ ಆರಾಧಿಸಿ ಅವರನ್ನು ಸಾಕ್ಷಾತ್ಕರಿಸಿಕೊಂಡ ಹೇಮರೆಡ್ಡಿ ಮಲ್ಲಮ್ಮ ಮೋಕ್ಷ ಪಡೆದುಕೊಳ್ಳಲು ಲೌಕಿಕ ಜೀವನವನ್ನು ತ್ಯಾಗ ಮಾಡದೆ ಸಂಸಾರದಲ್ಲಿದ್ದುಕೊಂಡು ಸದ್ಗತಿಯನ್ನು ಹೊಂದಿದ ಶ್ರೇಷ್ಠ ಮಹಿಳೆ. ಜೀವನದಲ್ಲಿ ದಾನ ಗುಣವನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದ ಮಹಿಳೆ ಮಲ್ಲಮ್ಮ ಎಂದು ಶಾಸಕ ಸಿದ್ದು ಸವದಿ ತಿಳಿಸಿದರು. ಅವರು ಶನಿವಾರ ಇಲ್ಲಿನ ತಹಶೀಲ್ದಾರ್ ಕಾರ್ಯಾಲಯದಲ್ಲಿ ಹೇಮರೆಡ್ಡಿ ಮಲ್ಲಮ್ಮನ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

ತಮ್ಮ ಜೀವನದಲ್ಲಿ ಸಾಕಷ್ಟು ನೋವು ಮತ್ತು ಸಂಕಷ್ಟಗಳನ್ನು ನೀಡಿದವರಿಗೆ ಯಾವಾಗಲೂ ಹಿತವನ್ನು ಬಯಸಿದವಳಾಗಿದ್ದಳು. ತನ್ನ ಕುಟುಂಬಕ್ಕೆ ಯಾವುದೆ ರೀತಿಯ ಕಷ್ಟ ಬರಬಾರದು ಮತ್ತು ಅವರಿಗೆ ಯಾವುದೆ ಕಾಲಕ್ಕೂ ಸಂಪತ್ತಿನ ಕೊರತೆ ಬರಬಾರದು ಎಂದು ಪ್ರಾರ್ಥಿಸಿದ್ದರು.

ಅವರ ಜೀವನ ಚರಿತ್ರೆಯನ್ನು ಓದುವ ಮೂಲಕ ನಾವೆಲ್ಲರೂ ಅವರ ಸಂದೇಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಬದುಕನ್ನು ನಿರ್ವಹಿಸಬೇಕು ಎಂದು ಶಾಸಕ ಸವದಿ ತಿಳಿಸಿದರು.

ತಹಶೀಲ್ದಾರ್ ಗಿರೀಶ ಸ್ವಾದಿ, ಶಿರಸ್ತೆದಾರ ರಾಜಶೇಖರ ಸಾತಿಹಾಳ, ಸಮಾಜದ ಮುಖಂಡರಾದ ನ್ಯಾಯವಾದಿ ವೆಂಕಟೇಶ ನಿಂಗಸಾನಿ, ಸಿದ್ದಪ್ಪ ಮೇಣಿ, ಕೃಷ್ಣಾ ಲೆಂಡಿ, ಕಂದಾಯ ನಿರೀಕ್ಷಕ ಪ್ರಕಾಶ ಮಠಪತಿ, ಗ್ರಾಮ ಲೆಕ್ಕಾಧಿಕಾರಿ ಸದಾಶಿವ ಕುಂಬಾರ, ಜಿ. ಎಸ್. ಗೊಂಬಿ, ಚೇತನ ಭಜಂತ್ರಿ, ರವಿ ಈಟಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ದೇಶದ ಸಾರ್ವಭೌಮತೆ, ಸುರಕ್ಷತೆಗಾಗಿ ನಾವೆಲ್ಲ ಒಂದಾಗಬೇಕು: ಸಂಜಯ ತೆಗ್ಗಿ
## ನಮ್ಮ ನಡುವೆಯೇ ಇರುವ ದೇಶದ್ರೋಹಿಗಳನ್ನು ಪಾಕಿಸ್ತಾನಕ್ಕೆ ದಬ್ಬಿ



**ರಬಕವಿ :** ಆಪರೇಶನ್ ಸಿಂಧೂರದಲ್ಲಿ ಭಾರತೀಯ ವೀರ ಯೋಧರು ದುಷ್ಟ ಪಾಪಿಸ್ತಾನಕ್ಕೆ ತಕ್ಕ ಪಾಠ ಕಲಿಸಲಿದ್ದಾರೆ. ನಮ್ಮ ವೀರಯೋಧರಿಗೆ ಗೆಲುವು ಅನಾಯಾಸವಾಗಲಿ ಮತ್ತು ಭಾರತದ ಸಾರ್ವಭೌಮತೆ, ಸುರಕ್ಷತೆ ವೃದ್ಧಿಸಲೆಂದು ಪ್ರಾರ್ಥಿಸಿ ವೀರಾಂಜನೇಯ ಮತ್ತು ದುರ್ಗಾಮಾತೆ ದೇಗುಲಗಳಲ್ಲಿ ಪೂಜೆ ಸಲ್ಲಿಸಿದ್ದೇವೆ. ದೇಶದ ಸಮಗ್ರತೆ ಕಾಯ್ದುಕೊಳ್ಳಲು ನಾವೆಲ್ಲರೂ ಒಂದಾಗಬೇಕು. ನಮ್ಮ ಯೋಧರಿಗೆ ಆತ್ಮಸ್ಥೈರ್ಯ ಹೆಚ್ಚಳಗೊಳಿಸಲು ಬೆಂಬಲ ನೀಡಬೇಕೆಂದು ಮಾಜಿ ನಗರಾಧ್ಯಕ್ಷ ಸಂಜಯ ತೆಗ್ಗಿ ಹೇಳಿದರು.

ಶನಿವಾರದಂದು ರಬಕವಿಯ ಹನುಮಾನ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಅವರು ಮಾತನಾಡಿ, ನಮ್ಮ ವೀರ ಸೈನಿಕರು ಪಾಪಿ ಪಾಕಿಸ್ತಾನದ ನೈಜ ಗುಣ ವಿಶ್ವದೆದುರು ಅನಾವರಣ ಮಾಡುತ್ತಿರುವಾಗ ದೇಶದೊಳಗಿನ ದೇಶದ್ರೋಹಿಗಳು ದೇಶ ವಿರೋಧಿ ಪೋಸ್ಟಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುತ್ತಿರುವುದು ಖಂಡನಾರ್ಹ. ಇಂಥ ದುರುಳರನ್ನು ರಾಜ್ಯ ಸರ್ಕಾರ ಬಂಧಿಸಿ ಕೇಂದ್ರಕ್ಕೆ ಒಪ್ಪಿಸಿ ನೇರವಾಗಿ ಪಾಕಿಸ್ತಾನಕ್ಕೆ ದಬ್ಬಬೇಕೆಂದರು. ಪಾಕ್ ಆಕ್ರಮಿತ ಕಾಶ್ಮೀರವನ್ನು ಮರಳಿ ಪಡೆಯುವವರೆಗೆ ಮತ್ತು ಪಹಲ್ಗಾಮ್ ನಲ್ಲಿ ಹೇಯ ಕೃತ್ಯ ಎಸಗಿದ ಉಗ್ರರಿಗೆ ಬೆಂಬಲಿಸಿದ ಪಾಕ್ಗೆ ನಮ್ಮ ಸೈನಿಕರು ದಿಟ್ಟ ಉತ್ತರ ನೀಡುತ್ತಿದ್ದಾರೆ. ಇದೇ ಕಾರ್ಯಾಚರಣೆ ಉಗ್ರ ನೆಲೆಗಳು ನಾಶವಾಗುವವರೆಗೂ ಮುಂದುವರೆಯಬೇಕು.

ಉಗ್ರರ ಸ್ವರ್ಗವಾಗಿರುವ ಪಾಕ್ ನಾಶವಾಗುವವರೆಗೂ ವಿಶ್ವಕ್ಕೆ ನೆಮ್ಮದಿ ಸಿಗದು. ಈ ಯುದ್ಧ ಕೇವಲ ಭಾರತದ ಹಿತಕ್ಕಾಗಿ ಮಾತ್ರವಲ್ಲ. ಬದಲಾಗಿ ಇಡೀ ವಿಶ್ವದಲ್ಲಿ ಆವರಿಸಿರುವ ಭಯೋತ್ಪಾದನೆ ನಿರ್ಮೂಲನೆಯೇ ಮೂಲಗುರಿಯಾಗಿದ್ದು, ಪೌರಾತ್ಯ ಮತ್ತು ಪಾಶ್ಚಾತ್ಯ ದೇಶಗಳೂ ಭಾರತದ ಉಗ್ರವಾದದ ವಿರುದ್ಧದ ಈ ಹೋರಾಟಕ್ಕೆ ಬೆಂಬಲಿಸುತ್ತಿವೆ ಎಂದರು.

ಈ ಸಂದರ್ಭದಲ್ಲಿ ಯಲ್ಲಪ್ಪ ಕಟಗಿ, ಜಯಪ್ರಕಾಶ ಸೊಲ್ಲಾಪುರ, ಮಹಾದೇವ ಕೋಟ್ಯಾಳ, ಬಸವರಾಜ ಅಮ್ಮಣಗಿಮಠ, ಅಣ್ಣಪ್ಪ ಚಾಪಿ, ಸುಭಾಷ್ ಮಧುರಖಂಡಿ, ಚಂದ್ರಶೇಖರ ಬಕನೆತ್ತಿ, ಉದಯ ಬಕ್ಕಣ್ಣವರ, ವಿಠಲ ಕಟಗಿ, ಪ್ರಕಾಶ ಮಸಳಿ, ಸರ್ವೇಶ ಅರಬಳ್ಳಿ, ನಿಂಗರಾಜ್ ನಾಯಕ, ಬಾಲಚಂದ್ರ ಕೊಕ್ಕಳಕಿ, ಮುತ್ತು ಹಿಪ್ಪರಗಿ, ಮಹಾನಂದಾ ಹೊರಟ್ಟಿ, ಭಾರತಿ ಕೊಪ್ಪದ, ಅರ್ಪಿತಾ ಬದಾಮಿಕರ, ಭಾರತಿ ಸಿಕ್ಕಲಗಾರ, ವಿಜಯಲಕ್ಷ್ಮಿ ಬಕ್ಕಣ್ಣವರ, ರತ್ನಾ ಬಕ್ಕಣ್ಣವರ ಸೇರಿದಂತೆ ಇನ್ನೂ ಅನೇಕ ಪ್ರಮುಖರು ಉಪಸ್ಥಿತರಿದ್ದರು.

## ಯೋಧರ ಒಳಿತಿಗೆ ವಿಶೇಷ ಪೂಜೆ



**ರಬಕವಿ-ಬನಹಟ್ಟಿ:** ಭಾರತೀಯ ಸೇನೆಯ ಯೋಧರಿಗೆ ಹೆಚ್ಚಿನ ಶಕ್ತಿಯನ್ನು ಭಗವಂತ ಅನುಗ್ರಹಿಸಲಿಯೆಂದು ವಿಶೇಷ ಸಂಕಲ್ಪ ಪೂಜೆಯನ್ನು ಬನಹಟ್ಟಿಯ ಕಾಡಸಿದ್ಧೇಶ್ವರ ದೇವಸ್ಥಾನ ಸೇರಿದಂತೆ ವಿವಿಧ ದೇವಾಲಯಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಂದ ನೆರವೇರಿಸಲಾಯಿತು.

ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಮಾತನಾಡಿ, ಭಾರತೀಯ ಸೇನೆಯ ಹೆಸರಿನಲ್ಲಿ ಹಾಗು ಭಾರತೀಯ ಯೋಧರಿಗೆ ಒಳಿತಾಗಲಿ, ಸೇನೆಗೆ ಹೆಚ್ಚಿನ ಶಕ್ತಿಯನ್ನು ಭಗವಂತ ಅನುಗ್ರಹಿಸಿ ಕರುಣಿಸಲೆಂದು ವಿಶೇಷ ಸಂಕಲ್ಪದೊಂದಿಗೆ ಪೂಜೆ ಸಲ್ಲಿಸಿದ್ದೇವೆಂದರು. ಕಾಶ್ಮೀರದ ಪಹಲ್ಗಾಮ್ನಲ್ಲಿ ನಡೆದ ಭಯೋತ್ಪಾದಕರ ದಾಳಿಗೆ ಇಡೀ ದೇಶವೆ ಖಂಡನೆ ಮಾಡುತ್ತಿದೆ.

ಇದಕ್ಕೆ ತಕ್ಕ ಉತ್ತರ ನೀಡುವಲ್ಲಿ ಕೇಂದ್ರ ಸಾಹಸಕ್ಕೆ ಕೈ ಹಾಕಿದೆ. ಗಡಿ ಹಾಗು ದೇಶದ ಜನರ ರಕ್ಷಣೆಗೆ ಪ್ರಾಣ ಪಣತೊಟ್ಟು ನಿಂತಿರುವ ನಮ್ಮ ಯೋಧರಿಗೆ ಒಳಿತಾಗಲಿ ಎಂದರು.

ಭೀಮಶಿ ಮಗದುಮ್, ಬಸವರಾಜ ಕೊಕಟನೂರ, ರವೀಂದ್ರ ಬಾಡಗಿ, ಶೇಖರ ಹಕ್ಕಲದಡ್ಡಿ, ಸದಾಶಿವ ಗೋಂದಕರ, ಗೋವಿಂದ ಜಾಧವ, ಸುರೇಶ ಪಾಟೀಲ, ರಾಜು ಶಿರಹಟ್ಟಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಸುರಾನ ಸಮೂಹ ಶಿಕ್ಷಣ ಸಂಸ್ಥೆಯಿಂದ ಜಿ.ಸಿ. ಸುರಾನ ಪ್ರಶಸ್ತಿ ಪ್ರದಾನ

## ರಾಜ್ಯದ ಪರಿವರ್ತನೆಗೆ ಮೂಲ ಸೌಕರ್ಯ, ಮಾನವ ಸಂಪನ್ಮೂಲವೇ ಕಾರಣ: ಡಿಸಿಎಂ ಡಿ.ಕೆ. ಶಿವಕುಮಾರ್

**ಬೆಂಗಳೂರು :** ರಾಜ್ಯದ ಪರಿವರ್ತನೆಗೆ ಮೂಲಸೌಕರ್ಯ ಮತ್ತು ಮಾನವ ಸಂಪನ್ಮೂಲಗಳ ಬಲವೇ ಕಾರಣ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಸುರಾನ ಸಮೂಹ ಶಿಕ್ಷಣ ಸಂಸ್ಥೆಯಿಂದ ಪೀಣ್ಯಾ ಕ್ಯಾಂಪಸ್‌ನಲ್ಲಿ "ಬದಲಾವಣೆಗಾಗಿ ಒಗ್ಗಟ್ಟು: ಶಿಕ್ಷಣ ಮತ್ತು ಕೈಗಾರಿಕೆ – ಸುಸ್ಥಿರ ಅಭಿವೃದ್ಧಿಗೆ ಚಾಲನೆ" ಎಂಬ ವಿಷಯದ ಜಿಸಿಎಸ್ ಕಾನ್ಕ್ಲೇವ್ 2025 ರಲ್ಲಿ ಸುರಾನ ಸಂಸ್ಥೆಯ ಜಿ.ಸಿ. ಸುರಾನ ಜೀವಮಾನ ಸಾಧನೆ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, "ನನಗೆ ದೊರೆತಿರುವ ಶ್ರೇಷ್ಠ ಪ್ರಶಸ್ತಿ ಎಂದರೆ ಜನರ ಪ್ರೀತಿ. ಹುಟ್ಟಿನಿಂದ ನಾನು ಕೃಷಿಕ, ಉತ್ಸಾಹದಿಂದ ರಾಜಕಾರಣಿ ಮತ್ತು ಆಯ್ಕೆಯಿಂದ ಶಿಕ್ಷಣ ತಜ್ಞ. ಶಿಕ್ಷಣ ಎಂಬುದು ನನಗೆ ಪ್ಯಾಷನ್. ಸುರಾನ ಸಂಸ್ಥೆ ಲಾಭದ ಆಸೆಯಿಲ್ಲದೇ ರಾಜ್ಯದಲ್ಲಿ ಶಿಕ್ಷಣ ನೀಡುತ್ತಿದೆ" ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬದಲಾವಣೆಗೆ ನಮ್ಮ ಪ್ರಬಲವಾದ ಸಂಪನ್ಮೂಲವೇ ಕಾರಣವಾಗಿದ್ದು, ಕರ್ನಾಟಕ ಮಾನವ ಸಂಪನ್ಮೂಲಗಳ ಕೇಂದ್ರವಾಗಿದೆ. ಜಗತ್ತು ಈಗ ಬೆಂಗಳೂರಿನತ್ತ ನೋಡುತ್ತಿದೆ. ಮೂರು ದಶಕಗಳ ಹಿಂದೆ, ಜಾಗತಿಕ ನಾಯಕರು ಇತರ ಭಾರತೀಯ ನಗರಗಳಿಗೆ ಭೇಟಿ ನೀಡಿ ಬೆಂಗಳೂರನ್ನು ಒಂದು ಆಯ್ಕೆಯಾಗಿ ಇಟ್ಟುಕೊಳ್ಳುತ್ತಿದ್ದರು. ಆದರೆ ಇಂದು ಅದು ಬದಲಾಗಿದೆ. ಇದೀಗ ಎಲ್ಲಾ ಜಾಗತಿಕ ನಾಯಕರು ಮೊದಲು ಬೆಂಗಳೂರಿಗೆ ಆಗಮಿಸುತ್ತಿದ್ದಾರೆ. ಜಗತ್ತಿನ ಯಾವುದೇ ದೇಶಕ್ಕೆ ಭೇಟಿ ನೀಡಿದರೂ ಬೆಂಗಳೂರಿನ ಬಗ್ಗೆ ಮಾತನಾಡುತ್ತಾರೆ. ಬೆಂಗಳೂರು ದೇಶಕ್ಕೆ ಬಹುದೊಡ್ಡ ಶಕ್ತಿ ಎಂದು ಹೇಳಿದರು.

ಕರ್ನಾಟಕದಲ್ಲಿ, ವಿಶೇಷವಾಗಿ ಬೆಂಗಳೂರಿನಲ್ಲಿ ಶಿಕ್ಷಣ ವ್ಯವಸ್ಥೆಯು ಪ್ರಮುಖ ಆಕರ್ಷಣೆಯಾಗಿದೆ. ಈ ಗುಣಮಟ್ಟದ ಶಿಕ್ಷಣವು ಬಲವಾದ ನೈತಿಕ ಮೌಲ್ಯಗಳೊಂದಿಗೆ ಸಂಯೋಜಿಸಲ್ಪಟ್ಟಿದೆ, ಇದು ನಮ್ಮ ರಾಜ್ಯವನ್ನು ಬಲಪಡಿಸಿದೆ. ರಾಜ್ಯದಲ್ಲಿ 70 ವೈದ್ಯಕೀಯ ಕಾಲೇಜುಗಳಿವೆ. ನರ್ಸಿಂಗ್ ಸೇರಿದಂತೆ ಎಲ್ಲಾ ವಿಷಯಗಳಲ್ಲಿ ನುರಿತ ಮಾನವ ಶಕ್ತಿಯನ್ನು ರೂಪಿಸುತ್ತಿದ್ದೇವೆ" ಎಂದು ಡಿ.ಕೆ. ಶಿವಕುಮಾರ್ ಹೇಳಿದರು.



ಶಾಂತಿ, ನೆಮ್ಮದಿಗಾಗಿ ಯಾಕೆ ದೇವಸ್ಥಾನಕ್ಕೆ ಹೋಗುತ್ತೇವೆ. ಧರ್ಮ ನಮಗೆ ಅತಿ ದೊಡ್ಡ ಬಲವಾಗಿದೆ. ಭಾರತ ಧಾರ್ಮಿಕವಾಗಿ ಅತ್ಯಂತ ಶ್ರೀಮಂತವಾಗಿದ್ದು, ಈ ಪರಂಪರೆಯನ್ನು ಮುಂದುವರೆಸಬೇಕು ಎಂದು ಕಿವಿ ಮಾತು ಹೇಳಿದರು.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿ, ಜಿ.ಸಿ. ಸುರಾನ ಅವರು ಅರ್ಥಪೂರ್ಣ ಜೀವನ ನಡೆಸಿದ ಸಾಧಕರಾಗಿದ್ದು, ಅವರ ಸಂಸ್ಥೆ ಸಮಾಜ ಕಟ್ಟುವ ಕಾರ್ಯದಲ್ಲಿ ನಿರತವಾಗಿದೆ. ಶಿಕ್ಷಣ ಜ್ಞಾನ ನೀಡಿದರೆ, ಕೈಗಾರಿಕಾ ವಲಯ ಉದ್ಯೋಗ ನೀಡುತ್ತದೆ. ಈ ಎರಡೂ ವಲಯಗಳು ಸೂಕ್ತ ರೀತಿಯಲ್ಲಿ ಸಾಗಿದಾಗ ಬಹುದೊಡ್ಡ ಬದಲಾವಣೆ ಸಾಧ್ಯವಾಗಲಿದೆ ಎಂದರು.

ಡಾ. ನಿರ್ಮಲಾನಂದನಾಥ ಸ್ವಾಮೀಜಿ ಸಮ್ಮುಖದಲ್ಲಿ ಡಾ. ಮಂಜಮ್ಮ ಜೋಗತಿ (ಕರ್ನಾಟಕ ಜಾನಪದ ಅಕಾಡೆಮಿ), ಡಾ. ಕೆ. ಗಾಯತ್ರಿ ರೆಡ್ಡಿ (ಎಂಜಿಐಆರ್‌ಇಡಿ), ಕಮಲ್ ಸಾಗರ್ (ಪರಿಸರ), ಜವಾಹರ್ ಗೋವಿಂದರಾಜ್ (ಪೆಂಟಗನ್ ಗಾರ್ಮೆಂಟ್ಸ್), ಡಾ. ಕಾನ್ರಾಡ್ ಅಟಾರ್ಡ್ (ಮಾಲ್ಟಾ ವಿಶ್ವವಿದ್ಯಾಲಯ), ತರುಣ್ ಮೆಹ್ತಾ (ಅಥರ್ ಎನರ್ಜಿ) ಮತ್ತು ಆದಿತ್ಯ ಸಿರೋಯಾ (ರಿಪರ್ಪಸ್ ಗ್ಲೋಬಲ್) ಅವರಿಗೆ ಜಿ.ಸಿ. ಸುರಾನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸೇಂಟ್ ಜಾನ್ಸ್ ರಾಷ್ಟ್ರೀಯ ಆರೋಗ್ಯ ವಿಜ್ಞಾನ ಅಕಾಡೆಮಿಯ ನಿರ್ದೇಶಕ ರೆವರೆಂಡ್ ಫಾದರ್ ಜೇಸುದಾಸ್ ರಾಜಮಾಣಿಕ್ಕಂ, ಸುರಾನ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪಕ ಟ್ರಸ್ಟಿ ಡಾ. ಅರ್ಚನಾ ಸುರಾನ ಮತ್ತು ಮೈಕ್ರೋ ಲ್ಯಾಬ್ಸ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ದಿಲೀಪ್ ಸುರಾನ ಉಪಸ್ಥಿತರಿದ್ದರು.

# ವಿಶ್ವ ರೆಡ್‌ಕ್ರಾಸ್ ದಿನಾಚರಣೆ



**ಬಾಗಲಕೋಟೆ :** ಶ್ರೀ ಎಸ್.ಆರ್. ನರಸಾಪೂರ ಕಲಾ ಹಾಗೂ ಎಂ.ಬಿ. ಶಿರೂರ ವಾಣಿಜ್ಯ ಮಹಾವಿದ್ಯಾಲಯದ ಆಂತರಿಕ ಗುಣಮಟ್ಟ ಭರವಸೆ ಕೋಶ ಹಾಗೂ ಯುಥ್ ರೆಡ್‌ಕ್ರಾಸ್ ಘಟಕ ವತಿಯಿಂದ ಗುರುವಾರ ರಂದು ಜೀನ ಹೇನ್ರಿ ಡ್ಯುನಾಂಟ್ ಅವರ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು.

ಪ್ರಭಾರ ಪ್ರಾಚಾರ್ಯ ಡಾ.ಎಸ್.ಎಸ್.ಹಂಗರಗಿ ಯುವ ರೆಡ್ ಕ್ರಾಸ್ ಘಟಕ ಸಂಯೋಜಕ ಕೃಷ್ಣಾ ಲಮಾಣಿ ಹಾಗೂ ಉಪನ್ಯಾಸಕರಾದ ಎಸ್.ಎಂ.ಹಡಪದ,ಎಸ್.ಪಿ.ದೇಶಪಾಂಡೆ,ಎನ್.ಬಿ.ಹಸಬಿ, ಎ.ಎ.ಗಂಗಲ್, ಕೆ.ಎಸ್.ದಾಸರ, ಎಚ್.ಜಿ.ಗೌಡರ, ಎಸ್.ವಾಯ್.ಬೊಮ್ಮಣ್ಣವರ, ಜಿ.ಕೆ.ಕಿಲಬನೂರ ಇ.ಎಸ್.ರಾಠೋಡ. ಎಂ.ಡಿ ಕೊರವಾರ, ಎನ್.ಎಚ್. ಹವಾಲ್ದಾರ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಅನಗವಾಡಿಯಲ್ಲಿ ಜಾನಪದ ಸಮ್ಮೇಳನ

**ಬೀಳಗಿ :** ತಾಲೂಕಿನ ಅನಗವಾಡಿ ಗ್ರಾಮದಲ್ಲಿ ಮೇ. 20 ರಂದು ಬಾಗಲಕೋಟೆ ಜಿಲ್ಲಾ ದ್ವಿತೀಯ ಕನ್ನಡ ಜಾನಪದ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ.

ಸಮ್ಮೇಳನದಲ್ಲಿ ಪುಸ್ತಕ ಮಳಿಗೆ ಸೇರಿದಂತೆ ವಿವಿಧ ಮಳಿಗೆಗಳನ್ನು ಹಾಕಲು ಇಚ್ಛಿಸುವವರು ಮೇ.18 ರೊಳಗಾಗಿ ಮೊಬೈಲ್ ಸಂಖ್ಯೆ 9880387072 (ಡಿ.ಎಂ.ಸಾವಕಾರ),8861581415(ಆರ್.ಬಿ.ನಬಿವಾಲೆ) ಹಾಗೂ 9731889098 (ಎಸ್. ಬಿ. ಹಿರೇಮಠ) ಇವರನ್ನು ಸಂಪರ್ಕಿಸಬೇಕೆಂದು ಕನ್ನಡ ಜಾನಪದ ಪರಿಷತ್ ಜಿಲ್ಲಾ ಕಾರ್ಯದರ್ಶಿ ತಿಳಿಸಿದ್ದಾರೆ.

## "ವಿಶ್ವ ಥಲಸ್ಸೆಮಿಯಾ ದಿನಾಚರಣೆ 2025"

# ಥಲಸ್ಸೆಮಿಯಾ ಮುಕ್ತ ಭವಿಷ್ಯಕ್ಕಾಗಿ ಜಾಗೃತಿ ಅಗತ್ಯ: ಡಾ. ಪಲ್ಲವಿ ಚರಂತಿಮಠ

**ಬಾಗಲಕೋಟೆ :** ಥಲಸ್ಸೆಮಿಯಾ ಎಂಬುದು ಆನುವಂಶಿಕ ರಕ್ತಕ್ಕೆ ಸಂಬಂಧಿಸಿದ ಅಸ್ವಸ್ಥತೆಯಾಗಿದೆ. ಥಲಸ್ಸೆಮಿಯಾ ಮುಕ್ತ ಭವಿಷ್ಯಕ್ಕಾಗಿ ಜನರಲ್ಲಿ ಜಾಗೃತಿ ಅಗತ್ಯ ಎಂದು ಎಸ್.ಎನ್.ಎಂ.ಸಿ. ಹಾಗೂ ಹೆಚ್.ಎಸ್.ಕೆ. ಆಸ್ಪತ್ರೆಯ ಚಿಕ್ಕಮಕ್ಕಳ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ॥ ಪಲ್ಲವಿ ಚರಂತಿಮಠ ಹೇಳಿದರು.

ನಗರದ ಪ್ರತಿಷ್ಠಿತ ಶ್ರೀ ಬ.ವಿ.ವ ಸಂಘದ ಸಜ್ಜಲಶ್ರೀ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಚಿಕ್ಕಮಕ್ಕಳ ಶುಶ್ರೂಷಾ ವಿಭಾಗದ ವತಿಯಿಂದ ಶುಕ್ರವಾರ ಕಾಲೇಜಿನ ಸಭಾಂಗಣದಲ್ಲಿ ವಿಶ್ವ ಥಲಸ್ಸೆಮಿಯಾ ದಿನಾಚರಣೆ ಕಾರ್ಯಕ್ರಮದಲ್ಲಿ ಅತಿಥಿ ಉಪನ್ಯಾಸಕರಾಗಿ ಆಗಮಿಸಿ ಮಾತನಾಡಿದ ಅವರು, ಅನುವಂಶಿಕತೆಯಿಂದ ಬರುವ ರಕ್ತದ ಅಸ್ವಸ್ಥತೆಯ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ವಿಶ್ವ ಥಲಸ್ಸೆಮಿಯಾ ದಿನವನ್ನು ಪ್ರತಿ ವರ್ಷ ಮೇ 08 ರಂದು ಆಚರಣೆ ಮಾಡಲಾಗುತ್ತದೆ. ಜಗತ್ತಿನಾದ್ಯಂತ ಕೋಟ್ಯಾಂತರ ಜನರು ಈ ಖಾಯಿಲೆಯಿಂದ ಬಳಲುತ್ತಿದ್ದು, ಅವರ ಬದುಕಿಗೆ ಬೆಂಬಲವಾಗಿ ನಿಂತು, ನೈತಿಕ ಸ್ಥೈರ್ಯ ತುಂಬುವ ಕೆಲಸದ ಜೊತೆಗೆ ಸೂಕ್ತ ಚಿಕಿತ್ಸೆ ಮತ್ತು ಉತ್ತಮ ಗುಣಮಟ್ಟದ ಆರೋಗ್ಯ ಸೇವೆಗಳ ಲಭ್ಯತೆಯ ಬಗ್ಗೆ ಅರಿವು ಮಾಡಿಸಬೇಕಾಗಿದೆ.




ಹಾನಗಲ್ ಶ್ರೀ. ಕುಮಾರೇಶ್ವರ ಆಸ್ಪತ್ರೆಯೂ ಕೂಡ 100 ಹಾಸಿಗೆಗಳ ಥಲಸ್ಸೆಮಿಯಾ ಘಟಕವನ್ನು ಹೊಂದಿದ್ದು, ಡಾ॥ ಭುವನೇಶ್ವರಿ ಯಳಮೇಲಿ ಇವರು ಈ ಘಟಕದ ಮುಖ್ಯಸ್ಥೆಯಾಗಿದ್ದು, ಈ ವಿಭಾಗಕ್ಕೆ ಚಿಕಿತ್ಸೆಗೆ ಬರುವ ಎಲ್ಲ ಮಕ್ಕಳಿಗೆ ಉಚಿತ ಚಿಕಿತ್ಸೆ ಹಾಗೂ ಕಡಿಮೆ ವೆಚ್ಚದಲ್ಲಿ ಶಸ್ತ್ರಚಿಕಿತ್ಸೆಯನ್ನು ನೀಡಲಾಗುತ್ತದೆ. ಈ ವಿಭಾಗದ ಸೇವೆಗಾಗಿ 2022ರಲ್ಲಿ ಆಸ್ಪತೆಗೆ ಹಾಗೂ ವಿಭಾಗದ ಮುಖ್ಯಸ್ಥರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದ್ದು ಹೆಮ್ಮೆಯ ವಿಷಯವಾಗಿದೆ ಎಂದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಮಹಾವಿದ್ಯಾಲಯ ಪ್ರಾಚಾರ್ಯ ಡಾ॥ ದೀಲಿಪ್ ಎಸ್. ನಾಟೇಕಾರ ಅವರು ಮಾತನಾಡಿ, ಆರೋಗ್ಯ ಶುಶ್ರೂಷಕರು ಹಾಗೂ ಆರೋಗ್ಯ ಶುಶ್ರೂಷಾ ಬೋಧಕ ಸಿಬ್ಬಂದಿಗಳು ಸಮುದಾಯಕ್ಕೆ ಭೇಟಿ ನೀಡಿ, ಥಲಸ್ಸೆಮಿಯಾ ರೋಗವನ್ನು ತಡೆಗಟ್ಟುವಿಕೆ, ಗುಣಪಡಿಸುವ ವಿಧಾನಗಳು ಮತ್ತು ಥಲಸ್ಸೆಮಿಯಾ ರೋಗಿಗಳ ಆರೈಕೆಯ ಬಗ್ಗೆ ಹಾಗೂ ಥಲಸ್ಸೆಮಿಯಾ ಬಾಧಿತ ಮಕ್ಕಳಿಗೆ ಸಾಧ್ಯವಾದಷ್ಟು ಉತ್ತಮವಾದ ಆರೈಕೆ ಮತ್ತು ಚಿಕಿತ್ಸೆ ನೀಡುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು.

ಚಿಕ್ಕಮಕ್ಕಳ ಶುಶ್ರೂಷಾ ವಿಭಾಗದ ಮುಖ್ಯಸ್ಥರಾದ ಡಾ॥ ದಾನೇಶ್ವರಿ ಹಿರೇಮಠ, ಸಂತೋಷ ಸಜ್ಜನ, ಡಾ॥ ನಿಂಗನಗೌಡ ಜಿ. ಪಾಟೀಲ, ಡಾ॥ ಪ್ರಶಾಂತ ಕುಲಕರ್ಣಿ, ಸಂತೋಷ ಸಜ್ಜನ, ಕುಮಾರಿ. ಚಂದ್ರಾ ಜತ್, ಕುಮಾರಿ ರೇಣುಕಾ ಜಾಲಿಹಾಳ, ಶ್ರೀದೇವಿ ತೇಲಿ ಸೇರಿದಂತೆ ಮಹಾವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯವರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಾರ್ಯಕ್ರಮವನ್ನು ಬಸವರಾಜ ನಿರೂಪಿಸಿದರು.

ನೇತ್ರಾವತಿ ಸ್ವಾಗತಿಸಿದರು.ಅಶ್ವಿನಿ ವಂದಿಸಿದರು.

# ಬಸವೇಶ್ವರ ಇಂಜಿನೀಯರಿಂಗ್ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಅವಿಷ್ಕಾರ–2025 ಪ್ರದರ್ಶನ

**ಬಾಗಲಕೋಟೆ :** ಪರಿಪೂರ್ಣತೆಯಿಂದ ನಿಖರವಾಗಿ ಕಾರ್ಯರೂಪಕ್ಕೆ ಇಳಿಸುವಂತ ಸಾಮರ್ಥ್ಯವನ್ನು ಭಾರತೀಯ ತಂತ್ರಜ್ಞರು ಹೊಂದಿದ್ದಾರೆ ಎಂದು ಬಿ.ವಿ.ವಿ.ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ನಿರ್ದೇಶಕರಾದ ಡಾ. ಆರ್.ಎನ್.ಹೇರಕಲ್ ಹೇಳಿದರು.

ಅವರು ಬಸವೇಶ್ವರ ಇಂಜಿನೀಯರಿಂಗ್ ಕಾಲೇಜಿನಲ್ಲಿ ಐಕ್ಯೂಎಸಿ ಹಾಗೂ ಇಲೇಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ವಿಭಾಗದ ಸಹಯೋಗದಲ್ಲಿ ಶುಕ್ರವಾರ ನಡೆದ ಕಾಲೇಜು ಮಟ್ಟದ ಇಂಜಿನೀಯರಿಂಗ ವಿದ್ಯಾರ್ಥಿಗಳ ಪ್ರಾಜೇಕ್ಟ್ ಪ್ರದರ್ಶನ ಅವಿಷ್ಕಾರ – 2025 ವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರಧಾನ ಮಂತ್ರಿಗಳ ಆಶಯದ ಮೇಕ್ ಇನ್ ಇಂಡಿಯಾದಂತ ಕಲ್ಪನೆಗಳು ಇಂದು ಉತ್ತಮ ಫಲಿತಾಂಶ ನೀಡುತ್ತಿವೆ, ನಮ್ಮ ಸ್ವದೇಶಿ ಪ್ರತಿಭೆಗಳಿಂದ ನಿರ್ಮಿತ ತಾಂತ್ರಿಕ ಉತ್ಪನಗಳಿಂದ ನಾವಿಂದು ಬೃಹತ್ ಜಾಗತಿಕ ಶಕ್ತಿಯಾಗಿ ಬೆಳೆದು ನಿಂತಿದ್ದೇವೆ, ಇಂಥಹ ವೇದಿಕೆ ಮೂಲಕ ವಿದ್ಯಾರ್ಥಿಗಳು ನಾವಿನ್ಯತೆಗಳ ಕುರಿತು ಯೋಜಿಸಿ ಸಾಕಾರಗೊಳಿಸುವತ್ತ ಪ್ರಯತ್ನಿಸಬೇಕು ಎಂದರು.




ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಕಾಲೇಜಿನ ಪ್ರಾಚಾರ್ಯ ಡಾ.ಬಿ.ಆರ್. ಹಿರೇಮಠ ಅವರು ಮಾತನಾಡಿ ಶೈಕ್ಷಣಿಕ ಮತ್ತು ಸೃಜನಾತ್ಮಕ ಚಟುವಟಿಕೆಗಳಿಗೆ ನೀರಂತವಾಗಿ ವಿದ್ಯಾರ್ಥಿಗಳಿಗೆ ಅವಕಾಶಗಳನ್ನು ಕಲ್ಪಿಸಲಾಗುತ್ತಿದೆ, ಇಂಥಹ ಸ್ಪರ್ದೆಗಳಲ್ಲಿ ಭಾಗವಹಿಸುವುದರಿಂದ ವಿದ್ಯಾರ್ಥಿಗಳ ತಾಂತ್ರಿಕ ನೈಪುಣ್ಯತೆ ಮತ್ತು ಕೌಶಲ್ಯಗಳು ವೃದ್ಧಿಯಾಗಲಿವೆ ಎಂದರು.

ಕಾರ್ಯಕ್ರಮದಲ್ಲಿ ದಾರವಾಡ ಐಐಟಿ ಪ್ರಾಧ್ಯಾಪಕರಾದ ಡಾ.ಮಂಜುನಾಥ, ಡಾ.ಪಂಕಜ ಕುಮಾರ ನಿರ್ಣಾಯಕರಾಗಿ ಆಗಮಿಸಿದ್ದರು,

2025ರ ಆವಿಷ್ಕಾರದ ಸಂಯೋಜಕರಾದ ಡಾ. ಮಮತಾ ಸತರೆಡ್ಡಿ ಸ್ವಾಗತಿಸಿದರು, ಆರ್&ಡಿ ವಿಭಾಗದ ಡೀನ್ ಡಾ.ಮಹಾಬಳೇಶ್ವರ.ಎಸ್.ಕೆ ಪ್ರಾಸ್ತಾವಿಕ ಮಾತನಾಡಿದರು, ಕುಮಾರಿ ಅನನ್ಯ ಜೋಶಿ ಪ್ರಾರ್ಥಿಸಿದರು, ಇ.ಸಿ.ಇ ವಿಭಾಗದ ಮುಖ್ಯಸ್ಥರಾದ ಡಾ.ಜಯಶ್ರೀ ಮಲ್ಲಾಪುರ ವಂದಿಸಿದರು, ಕುಮಾರಿ ಐಶ್ವರ್ಯ ಹಿಪ್ಪರಗಿ ಕಾರ್ಯಕ್ರಮ ನಿರೂಪಿಸಿದರು. ಅಕಾಡೆಮಿಕ ಡೀನ ಡಾ.ಪಿ.ಎನ್.ಕುಲಕರ್ಣಿ, ವಾಯ್.ಎಸ್.ನಾರಾಯಣ, ಅಭಿವೃದ್ಧಿ ಅಧಿಕಾರಿ ಪ್ರೋ.ಬಿ.ಎಸ್.ಹರವಿ, ಡಾ. ಭಾರತಿ ಮೇಟಿ, ಸಂಯೋಜಕ ಡಾ.ಬಿ.ಎಮ್.ಅಂಗಡಿ, ವಿಭಾಗದ ಮುಖ್ಯಸ್ಥರುಗಳು, ಪ್ರಾಧ್ಯಾಪಕರು ಉಪಸ್ಥಿತರಿದ್ದರು.

ಗಮನಸೇಳದ ಪ್ರದರ್ಶನ: ಕೃಷಿಯಲ್ಲಿ ಈರುಳ್ಳಿ ರಾಶಿಮಾಡುವ ಯಂತ್ರ, ನೈಟ್ರೋಜಿನ್ ಆಧರಿತ ಪರಿಸರ ಸ್ನೇಹಿ ಜೆಟ್ ಇಂಜಿನ್,

ಎಐ ಆಧಾರಿತ ಚಲನವಲನಗಳ ಗುರುತಿಸಿ, ಗಮನಿಸುವ ವ್ಯವಸ್ಥೆ, ಅರಣ್ಯ ಮತ್ತು ಘಾಟ ರಸ್ತೆಗಳಲ್ಲಾಗುವ ಅಪಘಾತ ತಡಗಟ್ಟುವ ಪ್ರಾತ್ಯಕ್ಷಿಕೆ, ಬೂಕಂಪ್‌ನ ನಿರೋಧಕ ಕಟ್ಟಡ ನಿರ್ಮಾಣದ ಪ್ರಾಜೇಕ್ಟ್‌ಗಳು ಗಮನಸೇಳೆದವು.

ಕಾಲೇಜು ಮಟ್ಟದ ಬಿ.ಇ ವಿದ್ಯಾರ್ಥಿಗಳು ಸಿದ್ದಪಡಿಸಿದ ಪ್ರಾಜೇಕ್ಟ್ ಪ್ರದರ್ಶನ 2025 ಅವಿಷ್ಕಾರದಲ್ಲಿ 350ಕ್ಕೂ ಅಧಿಕ ವಿದ್ಯಾರ್ಥಿಗಳು 100ಕ್ಕೂ ಹೆಚ್ಚು ಪ್ರಾಜೇಕ್ಟ್‌ಗಳನ್ನು ಪ್ರದರ್ಶನ ಮಾಡಿದರು.

## ಅಂತರಾಷ್ಟ್ರೀಯ ಶುಶ್ರೋಷಕಿಯರ ದಿನ ಆಚರಣೆ




**ಬಾಗಲಕೋಟೆ:** ನಗರದ ಬಿವಿವಿಎಸ್ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯದ ಪ್ರಸವ ಮತ್ತು ಸ್ತ್ರೀರೋಗ ಶಾಸ್ತ್ರ ಶುಶ್ರೂಷಾ ವಿಭಾಗದ ವತಿಯಿಂದ ಅಂತರರಾಷ್ಟ್ರೀಯ ಶುಶ್ರೋಷಿಕಿಯರ ದಿನಾಚರಣೆಯನ್ನು ಶಿರೂರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು. 'ಅಡಿಣಬಿಚಿಟ ಐಟಿ ಇತಜಡಿಥಿ ಅಡ್ಖು' ಎಂಬ ಜಾಗೃತಿ ಥೀಮ್ನಡಿ ಆಯೋಜಿಸಲಾದ ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಪ್ರಾಚಾರ್ಯೆ ಪ್ರೊ. ಜಯಶ್ರೀ ಇಟ್ಟಿ ಅವರು ಅಧ್ಯಕ್ಷತೆ ವಹಿಸಿ ಮಾತನಾಡಿದರು. ಅವರು "ಮಿಡ್ ವೈವ್ಸ್ ಗಳ ಸೇವೆ ಯಾವುದೇ ಸವಾಲಿನ ಸಂದರ್ಭದಲ್ಲಿ ಅನಿವಾರ್ಯವಾಗಿದ್ದು, ತಾಯಿ ಮತ್ತು ಮಗು ಸುರಕ್ಷತೆಗಾಗಿ ಅವರು ನಿರ್ವಹಿಸುವ ಕೆಲಸ ಅಮೂಲ್ಯವಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯ 2023ರ ವರದಿಯ ಪ್ರಕಾರ ಪ್ರತಿಯೊಂದು ಲಕ್ಷ ಗರ್ಭಿಣಿಯರಲ್ಲಿ 197 ತಾಯಂದಿರು ಮರಣ ಹೊಂದುತ್ತಿದ್ದಾರೆ. ಇಂತಹ ಪರಿಸ್ಥಿತಿಯನ್ನು ತಡೆಯುವುದು ಶುಶ್ರೂಷಕಿಯರ ಮುಖ್ಯ ಹೊಣೆಗಾರಿಕೆಯಾಗಿದೆ," ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಸವ ಮತ್ತು ಸ್ತ್ರೀರೋಗ ಶಾಸ್ತ್ರ ವಿಭಾಗದ ಮುಖ್ಯಸ್ಥೆ ಶ್ರೀಮತಿ ಶರಣಮ್ಮ ಬಂಟನೂರ ಅವರು 'ಅಡಿಣಬಿಚಿಟಟಿ ಇತಜಡಿಥಿ ಅಡ್ಖು' ಎಂಬ ಥೀಮ್ ಕುರಿತು ಪ್ರಾಸಂಗಿಕವಾಗಿ ವಿವರಿಸಿದರು. ಶುಶ್ರೂಷಕಿಯರ ಕರ್ತವ್ಯ, ತುರ್ತು ಪರಿಸ್ಥಿತಿಗಳಲ್ಲಿ ತ್ವರಿತ ನಿರ್ಧಾರಗಳ ಮಹತ್ವ ಹಾಗೂ ಆಶಾ ಕಾರ್ಯಕರ್ತೆಯರ ಸಹಭಾಗಿತ್ವದ ಕುರಿತು ಮಾಹಿತಿ ನೀಡಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಶಿರೂರ ಪ್ರಾಥಮಿಕ ಆರೋಗ್ಯ ಕೇಂದ್ರದ ಆಯುಷ್ ಅಧಿಕಾರಿ ಡಾ.ಜಯಶ್ರೀ ಅವರು ಹೆರಿಗೆ ವೇಳೆ ಅನುಸರಿಸಬೇಕಾದ ಸುರಕ್ಷತಾ ಕ್ರಮಗಳು, ತಾಯಿ?ಮಗು ಆರೈಕೆಯ ಪ್ರಾಮುಖ್ಯತೆ ಹಾಗೂ ಹಿಂದಿನ ಶುಶ್ರೂಷಕಿಯರ ಸೇವಾ ಪರಂಪರೆಯ ಬಗ್ಗೆ ಮಾಹಿತಿಯನ್ನು ನೀಡಿದರು.

ಇದಲ್ಲದೆ, ವಿಭಾಗದ ಸಿಬ್ಬಂದಿಗಳಾದ ಸಕ್ಕೂಬಾಯಿ ಹೊಸಮನಿ ಮತ್ತು ಕುಮಾರಿ ಶ್ರೀನಿಧಿ ಅವರು ತಾಯಿ?ಮಗು ಸುರಕ್ಷತೆ, ಪೋಷಣಾ ಅರಿವು ಹಾಗೂ ಆರೋಗ್ಯ ಸಂರಕ್ಷಣೆಯ ಕುರಿತು ಉಪನ್ಯಾಸ ನೀಡಿದರು. ಕಾರ್ಯಕ್ರಮವನ್ನು ಬಿಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳು ಸಂಯೋಜಿಸಿ ಯಶಸ್ವಿಯಾಗಿ ನಿರ್ವಹಿಸಿದರು.

# ಥಲಸ್ಸೇಮಿಯಾ ಸೊಸೈಟಿಯಿಂದ ರಕ್ತದಾನ ಶಿಬಿರ

**ಬಾಗಲಕೋಟೆ :** ಬಿ.ವಿ.ವಿ ಸಂಘದ ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆಯ ಥಲಸ್ಸೇಮಿಯಾ ಮತ್ತು ಹೆಮೋಫಿಲಿಯಾ ಸೊಸೈಟಿಯಿಂದ 'ವಿಶ್ವ ಥಲಸ್ಸೇಮಿಯಾ ದಿನ'ದ ಪ್ರಯುಕ್ತ ಮೇ 8 ರಂದು ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು. ಬಿ.ವಿ.ವಿ ಸಂಘದ ಹೊಮಿಯೋಪತಿ ಕಾಲೇಜಿನಲ್ಲಿ ಆಯೋಜಿಸಲಾದ ರಕ್ತದಾನ ಶಿಬಿರದಲ್ಲಿ ಸುಮಾರು 250 ವಿದ್ಯಾರ್ಥಿಗಳು ರಕ್ತದಾನ ಮಾಡಿದರು.

ರಕ್ತದಾನ ಶಿಬಿರದಲ್ಲಿ ರಕ್ತದಾನಿಗಳನ್ನು ಉದ್ದೇಶಿಸಿ ಮಾತನಾಡಿದ ಎಸ್.ನಿಜಲಿಂಗಪ್ಪ ವೈದ್ಯಕೀಯ ಕಾಲೇಜಿನ ಚಿಕ್ಕಮಕ್ಕಳ ವಿಭಾಗದ ಮುಖ್ಯಸ್ಥರಾದ ಡಾ.ಅಶೋಕ ಬಡಕಲಿ ಅವರು 'ಥಲಸ್ಸೇಮಿಯಾ ಕಾಯಿಲೆಯಿಂದ ಬಳಲುತ್ತಿರುವ ಮಕ್ಕಳಿಗೆ ನಿಯಮಿತವಾಗಿ ರಕ್ತದ ಅವಶ್ಯಕತೆ ಇರುತ್ತದೆ. ಬಡಕುಟುಂಬಗಳಿಗೆ ಚಿಕಿತ್ಸೆ ಮತ್ತು ರಕ್ತದ ವೆಚ್ಚ ಭರಿಸಲು ಆರ್ಥಿಕವಾಗಿ ತೊಂದರೆಯಾಗುತ್ತದೆ. ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ನೆರವಾಗುವ ಉದ್ದೇಶದಿಂದ ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆಯಲ್ಲಿ ಥಲಸ್ಸೇಮಿಯಾ ಮತ್ತು ಹೆಮೋಫಿಲಿಯಾ ಸೊಸೈಟಿಯನ್ನು ಸ್ಥಾಪಿಸಿ ಉಚಿತವಾಗಿ ರಕ್ತ ಹಾಗೂ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ವಿಶ್ವ ಥಲಸ್ಸೇಮಿಯಾ ದಿನದ ಅಂಗವಾಗಿ ಆಯೋಜಿಸಿರುವ ಈ ರಕ್ತದಾನ ಶಿಬಿರದಲ್ಲಿ ಹೊಮಿಯೋಪತಿ ಕಾಲೇಜಿನ ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ಬಂದು ರಕ್ತದಾನ ಮಾಡಿರುವುದು ಅಭಿನಂದನಾರ್ಹವಾಗಿದೆ. ಸಾರ್ವಜನಿಕರು ಸ್ವಯಂಪ್ರೇರಿತರಾಗಿ ಮುಂದೆ ಬಂದು ರಕ್ತದಾನ ಮಾಡಿದರೆ ಥಲಸ್ಸೇಮಿಯಾ ಕಾಯಿಲೆಯಿಂದ ಬಳಲುತ್ತಿರುವ ಮಕ್ಕಳ ರಕ್ತದ ಅವಶ್ಯಕತೆಯನ್ನು ಪೂರೈಸುವುದು ಸುಲಭ ಸಾಧ್ಯವಾಗುತ್ತದೆ' ಎಂದರು.




ರಕ್ತದಾನ ಶಿಬಿರದಲ್ಲಿ ಹೊಮಿಯೋಪತಿ ಕಾಲೇಜಿನ ಪ್ರಾಚಾರ್ಯರಾದ ಡಾ.ಅರುಣ ಹೂಲಿ, ಪ್ರಾಧ್ಯಾಪಕರಾದ ಡಾ.ರವಿ ಕೊಟೆಣ್ಣವರ, ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆಯ ಚಿಕ್ಕಮಕ್ಕಳ ವಿಭಾಗದ ಡಾ.ಅರುಣ ಕಟ್ಟಿ, ಕುಮಾರೇಶ್ವರ ಆಸ್ಪತ್ರೆಯ ರಕ್ತಭಂಡಾರದ ವೈದ್ಯಾಧಿಕಾರಿ ಡಾ.ಕೇಶವ ಕುಲಕರ್ಣಿ ಮತ್ತು ಸಿಬ್ಬಂದಿ ಭಾಗವಹಿಸಿದ್ದರು.

ರಕ್ತದಾನ ಶಿಬಿರವನ್ನು ಆಯೋಜಿಸಿದ ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆಯ ವೈದ್ಯರನ್ನು ಮತ್ತು ಶಿಬಿರದಲ್ಲಿ ರಕ್ತದಾನ ಮಾಡಿದ ವಿದ್ಯಾರ್ಥಿಗಳನ್ನು ಬಿ.ವಿ.ವಿ ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಸಿ.ಚರಂತಿಮಠ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷರಾದ ಅಶೋಕ ಎಮ್.ಸಜ್ಜನ (ಬೇವೂರ), ಹೊಮಿಯೋಪತಿ ಕಾಲೇಜಿನ ಆಡಳಿತ ಮಂಡಳಿ ಕಾರ್ಯಾಧ್ಯಕ್ಷರಾದ ಮಲ್ಲಿಕಾರ್ಜುನ ಸಾಸನೂರ, ಮೆಡಿಕಲ್ ಕಾಲೇಜ್ ಪ್ರಾಚಾರ್ಯರಾದ ಡಾ.ಭುವನೇಶ್ವರಿ ಯಳಮಲಿ ಮತ್ತು ವೈದ್ಯಕೀಯ ಅಧೀಕ್ಷಕರಾದ ಡಾ.ಶ್ರೀರಾಮ ಕೋರಾ ಅಭಿನಂದಿಸಿರುವರು.

# ಆಕ್ಷೇಪಣೆಗೆ ಅವಕಾಶ

**ಬಾಗಲಕೋಟೆ :** ರಾಷ್ಟ್ರೀಯ ಹೆದ್ದಾರಿ ಸಂಖ್ಯೆ–50 ವಿಜಯಪುರ–ಹುನಗುಂದ ರಸ್ತೆಯ ಕೂಡಲ ಸಂಗಮ ಕ್ರಾಸ್ ಹತ್ತಿರದ ಕೆಳ ರಸ್ತೆ ನಿರ್ಮಾಣ ಕಾಮಗಾರಿಯಲ್ಲಿ ಬರುವ ಅಂದಾಜು 110 ಮರಗಳನ್ನು ಹಾಗೂ ಬೆಳಗಲ್ ಕ್ರಾಸ್ ಹತ್ತಿರದ ಕೆಳ ರಸ್ತೆ ನಿರ್ಮಾಣ ಕಾಮಗಾರಿಯಲ್ಲಿ ಬರುವ ಅಂದಾಜು 123 ಮರಗಳನ್ನು ತೆರವುಗೊಳಿಸುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಯೋಜನಾ ಅನುಷ್ಠಾನ ಘಟಕ ಬಾಗಲಕೋಟ ಇವರು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಬಾಗಲಕೋಟ ವಿಭಾಗ ಇವರ ಕಚೇರಿಗೆ ವಿನಂತಿಸಿದ್ದು, ಅಂದಾಜು 233 ಮರಗಳನ್ನು ತೆರವುಗೊಳಿಸಲು ಯಾವುದೇ ಆಕ್ಷೇಪಣೆ, ತಂಟೆ ತಕರಾರುಗಳು ಇದ್ದಲ್ಲಿ ಈ ಸಾರ್ವಜನಿಕ ಪ್ರಕಟಣೆಯು ಪ್ರಕಟವಾದ 7 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ ವಲಯ ಅರಣ್ಯ ಅಧಿಕಾರಿ ಹುನಗುಂದ/ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಉಪ ವಿಭಾಗ ಬಾಗಲಕೋಟ/ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಬಾಗಲಕೋಟ ವಿಭಾಗ ಇವರ ಕಚೇರಿಗೆ ಸಲ್ಲಿಸುವಂತೆ ಬಾಗಲಕೋಟ ಡಿಎಫ್‌ಓ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮರಗಳ ತೆರವು, ಆಕ್ಷೇಪಣೆಗೆ ಅವಕಾಶ

**ಬಾಗಲಕೋಟೆ :** ಜಮಖಂಡಿ ಪಟ್ಟಣ ವ್ಯಾಪ್ತಿಯಲ್ಲಿ ಹಾಯ್ದು ಹೋಗುವ ರಾಮತೀರ್ಥ ಪ್ಯಾಲೇಸ್ (ದೇಸಾಯಿ ಸರ್ಕಲ್ ದಿಂದ ಅರಣ್ಯ ಇಲಾಖೆಯವರೆಗೆ ಹಾಗೂ ಚೆನ್ನಮ್ಮ ಸರ್ಕಲ್ ರಾ.ಹೆ 53 ರ ರಸ್ತೆ ಅಗಲಿಕರಣದಲ್ಲಿ ಬರುವ 49 ಮರಗಳನ್ನು ತೆರವುಗೊಳಿಸಲಾಗುತ್ತಿದ್ದು, ಸಾರ್ವಜನಿಕ, ಸಂಘ ಸಂಸ್ಥೆಗಳ ಆಕ್ಷೇಪಣೆ, ತಕರಾರು ಇದ್ದಲ್ಲಿ ಈ ಪ್ರಕಟಣೆಯು ಪ್ರಕಟವಾದ 7 ದಿನಗಳ ಒಳಗಾಗಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಉಪ ವಿಭಾಗ ಜಮಖಂಡಿ

ಅಥವಾ ವಲಯ ಅರಣ್ಯ ಅಧಿಕಾರಿ ಜಮಖಂಡಿ ಇವರ ಕಚೇರಿಗೆ ಸಲ್ಲಿಸುವಂತೆ ಜಮಖಂಡಿ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶೈಕ್ಷಣಿಕ ಜಾಗೃತಿಯಿಂದ ನಿರುದ್ಯೋಗ ಮಾಯ: ಬಸವರಾಜ ಉಪ್ಪಲದಿನ್ನಿ



**ಕೊಪ್ಪಳ :** ಕುಷ್ಟಗಿ ತಾಲೂಕಿನ ಕಂದಕೂರು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ನೆರೆಬೆಂಚಿ ಗ್ರಾಮದಲ್ಲಿನ ನರೇಗಾ ಕಾಯಕ ಸ್ಥಳದಲ್ಲಿ ಜನಜಾಗೃತಿ ಕಲಾರಂಗ ಸಂಸ್ಥೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆದ 2023–24ನೇ ಸಾಲಿನ ಸಂಘ–ಸಂಸ್ಥೆಗಳ ಧನಸಹಾಯ ಯೋಜನೆಯಡಿಯಲ್ಲಿ ಎಂಬ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಕಲಾವಿದ ಬಸವರಾಜ ಉಪ್ಪಲದಿನ್ನಿಅವರುಶೈಕ್ಷಣಿಕಜಾಗೃತಿಯಿಂದ ನಿರುದ್ಯೋಗ ಮಾಯವಾಗಲಿದೆ ಎಂದು ಹೇಳಿದರು.

"ರಾಷ್ಟ್ರೀಯ ಯೋಜನೆಗಳು ಜನಸಾಮಾನ್ಯರಿಗೆ ತಲುಪಬೇಕು, ಶಿಕ್ಷಣದ ಅವಶ್ಯಕತೆ ಬಹಳಷ್ಟಿದ್ದು ಎಲ್ಲ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸುವುದರ ಮೂಲಕ ಅವರ ಭವಿಷ್ಯವನ್ನು ಸುಂದರಗೊಳಿಸಬೇಕು. ಕಲ್ಯಾಣ ಕರ್ನಾಟಕ ಭಾಗದ ನಿರುದ್ಯೋಗಿ ಯುವಕ, ಯುವತಿಯರಿಗೆ ವರದಾನವಾಗಿರುವ 371ಜೆ ಕಲಂನ ಅಂಶಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಈ ಮೂಲಕ ಉನ್ನತ ಶಿಕ್ಷಣ ಮತ್ತು ಉದ್ಯೋಗವನ್ನು ಪಡೆಯಲು ಸಾಧ್ಯ, ಪರಿಸರದ ಸ್ವಚ್ಛತೆ ಬಹಳ ಮುಖ್ಯವಾಗಿದ್ದು. ಮಾಲಿನ್ಯವನ್ನು ತೊಡೆದುಹಾಕಬೇಕಿದೆ" ಎಂದು ಹೇಳಿ ಸ್ವಚ್ಛತೆಯ ಕುರಿತು ಜಾಗೃತಿ ಗೀತೆಯನ್ನು ಹಾಡಿ ಗಮನಸೆಳೆದರು.

ನೆರೆಬೆಂಚಿ ಗ್ರಾಮಪಂಚಾಯತಿ ಉಪಾಧ್ಯಕ್ಷರಾದ ಜಯಮ್ಮ ಬಸವರಾಜ ಉಪ್ಪಲದಿನ್ನಿ ಅವರು ತಮಟೆ ಬಾರಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜನಜಾಗೃತಿ ಕಲಾರಂಗ ಸಂಸ್ಥೆಯ ಅಧ್ಯಕ್ಷರು, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶರಣಪ್ಪ ವಡಿಗೇರಿ ಅವರು ಕಾರ್ಯಕ್ರಮ ಅಧ್ಯಕ್ಷತೆವಹಿಸಿದ್ದರು. ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶರಣಪ್ಪ ಬನ್ನಿಗೋಳ ಅವರಿಂದ ಸುಗ್ಗಿಯ ಹಾಡು ಹಾಗೂ ದೇವೇಂದ್ರಪ್ಪ ಕಮ್ಮಾರ ಅವರಿಂದ ವಚನ ಗಾಯನ, ವೀರಯ್ಯ ಹಿರೇಮಠ ಮತ್ತು ಬಸವರಾಜ ಉಪ್ಪಲದಿನ್ನಿ ಅವರಿಂದ ಜಾಗೃತಿ ಗೀತೆಗಳ ಮೂಲಕ ಜನಮನ ರಂಜಿಸಿದರು. ಮತ್ತು ಶಿವಲಿಂಗಪ್ಪ ಪೂಜಾರ ಅವರ ಕಲಾ ತಂಡದವರಿಂದ ಸ್ವಚ್ಛಭಾರತ ಮತ್ತು ಶೈಕ್ಷಣಿಕ ಜಾಗೃತಿ ವಿಷಯದ ಕುರಿತು ಅರಿವು ಮೂಡಿಸುವ ಬೀದಿನಾಟಕ ಕಾರ್ಯಕ್ರಮ ಪ್ರದರ್ಶಿಸಿದರು. ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ನೆರೆಬೆಂಚಿ ಗ್ರಾಮ ಪಂಚಾಯತಿ ಸದಸ್ಯರಾದ ಶೇಖಪ್ಪ ಮ್ಯಾಗಳಮನಿ, ಹನಮಗೌಡ ಪಾಟೀಲ, ಶರಣಪ್ಪ ಮೇಟಿ, ಚಂದ್ರಶೇಖರ ಗದ್ದಿ, ಭರಮಣ್ಣಕಲಗೋಡಿ,ದುರುಗವ್ವ,ಲೋಕೇಶ ಪಾಟೀಲ, ಬಾನುಬೇಗಂ, ಮಂಜುನಾಥ, ಶರಣಗೌಡ ಮತ್ತು ನಾಗರಾಜ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಪರಸ್ಪರ ಸೌಹಾರ್ದತೆ ಬೆಳೆಸಿಕೊಂಡು ಜೀವನ ಸಾಗಿಸಿದರೆ ಬದುಕು ಸಾರ್ಥಕ–ಅಮ್ಜದ್ ಪಟೇಲ್



**ಕೊಪ್ಪಳ :** ಹಬ್ಬ ಹರಿದಿನಗಳಲ್ಲಿ ನಾವುಗಳು ಪರಸ್ಪರ ಭಾವೈಕ್ಯತೆಯನ್ನು ಬೆಳೆಸಿಕೊಂಡು ಹಬ್ಬಗಳ ಆಚರಣೆ ಮಾಡುವುದರ ಜೊತೆಗೆ ಸೌಹಾರ್ದತೆ ಬೆಳೆಸಿಕೊಂಡು ನಮ್ಮ ನಮ್ಮ ಬದುಕು ಕಟ್ಟಿಕೊಳ್ಳಬೇಕು ಅಂದಾಗ ಮಾತ್ರ ನಮ್ಮ ಜೀವನ ಸಾರ್ಥಕವಾಗುತ್ತದೆ ಎಂದು ಕೊಪ್ಪಳ ನಗರಸಭೆಯ ಅಧ್ಯಕ್ಷ ಅಮ್ಜದ್ ಪಟೇಲ್ ಹೇಳಿದರು.

ಅವರು ನಗರದ ಹಮಾಲರ ಕಾಲೋನಿ ಯಲ್ಲಿ ಕೋರಮ್ಮ ದೇವಿ ಜಾತ್ರಾ ಮಹೋತ್ಸವ ದ ಪ್ರಯುಕ್ತ ಏರ್ಪಡಿಸಿದ ರಕ್ತದಾನ ಮತ್ತು ಕಣ್ಣಿನ ನೇತ್ರ ಚಿಕಿತ್ಸೆ ಶಿಬಿರದ ಉದ್ಘಾಟನೆ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು, ಮುಂದುವರಿದು ಮಾತನಾಡಿ ನಮ್ಮ ನಗರದ ಈ ಹಮಾಲರ ಕಾಲೋನಿ ಸೌಹಾರ್ದತೆಗೆ ಹೆಸರುವಾಸಿಯಾಗಿದೆ ಯಾವುದೇ ಹಬ್ಬ ಹರಿದಿನಗಳು ಬಂದಾಗ ಎಲ್ಲರೂ ಕೂಡಿಕೊಂಡು ಪರಸ್ಪರ ಸೌಹಾರ್ದತೆಯಿಂದ ಹಬ್ಬಗಳ ಆಚರಣೆ ಮಾಡುತ್ತೇವೆ ಇದು ಎಲ್ಲರಿಗೆ ಮಾದರಿ ಎಂದು ಅವರು ಬಣ್ಣಿಸಿದರು, ಹಬ್ಬಗಳಲ್ಲಿ ಸೋದರತ್ವ ಬಾಂಧವ್ಯ ದಿಂದ ನಡೆದುಕೊಂಡು ಬಂದಿರುವ ಇತಿಹಾಸ ನಮ್ಮ ಕಾಲೋನಿಯ ಜನರು ಮುನ್ನಡೆಸಿಕೊಂಡು ಬಂದಿದ್ದಾರೆಹಬ್ಬಗಳಆಚರಣೆಮೂಲಕನಮ್ಮನಾಡಿನ ಸಂಸ್ಕೃತಿ ಕಲೆಯ ಪರಂಪರೆ ಉಳಿಸಿಕೊಂಡು ಬರುವ ಕೆಲಸ ಎಂದು ಹೇಳಿದ ಅವರು ಇಂದಿನ ಈ ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಸಾರ್ವಜನಿಕರಿಗೆ ಅದರಲ್ಲಿ ಬಡ ರೋಗಿಗಳಿಗೆ ಅನುಕೂಲವಾಗಲು ರಕ್ತದಾನ ಶಿಬಿರ ಮತ್ತು ಕಣ್ಣಿನ ನೇತ್ರ ಚಿಕಿತ್ಸಾ ಶಿಬಿರ ಏರ್ಪಡಿಸಿರುವುದು ಅತ್ಯಂತ ಮೆಚ್ಚುಗೆಗೆ ಪಾತ್ರ ವಾದ ಕೆಲಸ ಇದಾಗಿದೆ ಎಂದು ಕೊಪ್ಪಳ ನಗರಸಭೆಯ ಅಧ್ಯಕ್ಷ ಅಮ್ಜದ್ ಪಟೇಲ್ ಅಭಿಪ್ರಾಯ ಪಟ್ಟರು,

ಸಮಾರಂಭದಲ್ಲಿ ಜೆಡಿಎಸ್ ಪಕ್ಷದ ರಾಜ್ಯ ಮುಖಂಡ ಹಾಗೂ ಕೊಪ್ಪಳದ ಹಿರಿಯ ಸಮಾಜ ಸೇವಕ ಸಿವಿ ಚಂದ್ರಶೇಖರ್, ಕೊಪ್ಪಳ ನಗರಸಭೆಯ ಉಪಾಧ್ಯಕ್ಷರಾದ ಅಶ್ವಿನಿ ಗದುಗಿನ ಮಠ ,ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಗೂಳಪ್ಪ ಹಲಗೇರಿ ,ಪತ್ರಕರ್ತ ಸಂತೋಷ್ ದೇಶಪಾಂಡೆ, ಮಹಾಲಕ್ಷ್ಮಿ ಕಂದಾರಿ ,ಕೋರಮ್ಮ ದೇವಸ್ಥಾನ ಸಮಿತಿಯ ಅಧ್ಯಕ್ಷರಾದ ವೇಣು ಲಡ್ಡು ,ಉಪಾಧ್ಯಕ್ಷ ದೇವಪ್ಪ ಚಿಗರಿ ಶಿವಾಜಿ ಗುದಗಿ ,ಹನುಮಂತಪ್ಪ ಬನ್ನಿಕೊಪ್ಪ, ನಾಗರಾಜ ಮೇಟಿ, ಬಶೀರ್ ಅಹ್ಮದ್ ಅತ್ತಾರ್, ಶರಣಪ್ಪ ಪಾಟೀಲ್ ಸೇರಿದಂತೆ ಅನೇಕರು ಹಾಗೂ ಬುಡ್ಡಪ್ಪ ಗೆಜ್ಜೆ ಹನುಮಂತಪ್ಪ ಕನ್ಯಾಳ ಕಾರ್ಯಕರ್ತರು ಮತ್ತು ಅಭಿಮಾನಿಗಳು ಪಾಲ್ಗೊಂಡಿದ್ದರು.

# ಶ್ರೀ ಶಿವಶರಣೆ ಮಹಾಸಾದಿ ಹೇಮರಡ್ಡಿ ಮಲ್ಲಮ್ಮ ಜಯಂತಿ: ಜಿಲ್ಲಾಡಳಿತದಿಂದ ಪುಷ್ಪ ನಮನ ಸಲ್ಲಿಕೆ



**ಕೊಪ್ಪಳ :** ಕೊಪ್ಪಳ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿಶ್ರೀಶಿವಶರಣೆಮಹಾಸಾದಿ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ ಆಚರಿಸಲಾಯಿತು.

ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ ಅವರು ಶ್ರೀ ಶಿವಶರಣೆ ಮಹಾಸಾದಿ ಹೇಮರಡ್ಡಿ ಮಲ್ಲಮ್ಮ ನವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ಮರಬನಳ್ಳಿ, ಸಿಬ್ಬಂದಿ ಮುತ್ತಣ್ಣ ಚಲವಾದಿ, ಪೋಲಿಸ್ ಇಲಾಖೆಯ ಎ.ಎಸ್.ಐ ಸುರೇಶ್ ಕೆ.ಹೆಚ್ ಹಾಗೂ ಸಮಾಜದ ಮುಖಂಡರಾದ ವೀರುಪಣ್ಣ ನವೋದಯ ಕೊಪ್ಪಳ, ಬಿ.ಶರಣಪ್ಪ ವಕೀಲರು, ಶಿವರಡ್ಡಿ ಹೆಚ್.ಬಿ, ಶಂಕರಗೌಡ ಹಿರೇಗೌಡರ್, ಹನುಮರಡ್ಡಿ ಹಂಚಿನಕಟ್ಟಿ, ಸಿದ್ದರೆಡ್ಡಿ ಕೆಂಚರಡ್ಡಿ, ಚಂದ್ರಶೇಖರಗೌಡ ಪಾಟೀಲ್, ಸಂಧ್ಯಾಮದೀನೂರ ವಕೀಲರು,ಬಸವರಡ್ಡಿ ಮದೀನೂರ, ದೇವರಡ್ಡಿ ಹಳ್ಳಿಕೇರಿ, ಪ್ರಕಾಶ್ ರಡ್ಡಿ, ಹೇಮರಡ್ಡಿ ಕೆಂಚರೆಡ್ಡಿ, ನಾಗರಾಜ ಸುನಗ, ಸೇರಿದಂತೆ ಇನ್ನೂ ಹಲವರು ಮತ್ತು ಜಿಲ್ಲಾಧಿಕಾರಿ ಕಚೇರಿಯ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.



**ಕೊಪ್ಪಳ : ಇತ್ತೀಚೆಗೆ ಎನ್.ಹೆಚ್.67 ಕೊಪ್ಪಳ ನಗರದ ಬೈಪಾಸ್ ರಸ್ತೆಯ ಚುಕ್ಕನಕಲ್ ಗ್ರಾಮದ ಹತ್ತಿರ ಪ್ರತಿ ಭಾರಿ ಅಪಘಾತವಾಗಿ ಸಾವು ನೋವು ಸಂಬಂವಿಸುತ್ತಿವೆ. ಸದರಿ ಸ್ಥಳದಲ್ಲಿ ಅಪಘಾತವಾಗದಂತೆ ಮುನ್ನೇಚ್ಚರಿಕೆ ಕ್ರಮಗಳನ್ನುಕೈಗೊಳ್ಳಲು ಮಾನ್ಯಲೋಕಸಭಾ ಸದದ್ಯರಾದ ಶ್ರೀ ರಾಜಶೇಕರ ಹಿಟ್ನಾಳ ರವರು, ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳೊಂದಿಗೆ, ಪೋಲಿಸ್ ಅಧಿಕಾರಿಗಳೊಂದಿಗೆ ಸುಧೀರ್ಘ ಚರ್ಚೆ ಮಾಡಿದರು, ತಾತ್ಕಾಲಿಕವಾಗಿ ಅಪಘಾತಗಳನ್ನು ತಡೆಗಟ್ಟಲು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು. ಈ ಸಂಬಂರ್ಧದಲ್ಲಿ ರಾಷ್ಟ್ರೀಯ ಹೆದ್ದಾರಿ ಅಧಿಕಾರಿಗಳು, ಪೋಲಿಸ್ ಅಧಿಕಾರಿಗಳು, ಇನ್ನೀತರ ಸಾರ್ವಜನಿಕರು ಹಾಜರಿದ್ದರು.**

# ಅತಿಥಿ ಉಪನ್ಯಾಸಕ ಮತ್ತು ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಆಹ್ವಾನ


**ಕೊಪ್ಪಳ :** 2025–26ನೇ ಸಾಲಿಗೆ ಕೊಪ್ಪಳ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ವಸತಿ ಕಾಲೇಜು, ಮೌಲಾನಾ ಆಜಾದ್ ಮಾದರಿ ಶಾಲೆ ಮತ್ತು ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕ,ಶಿಕ್ಷಕರ ತಾತ್ಕಾಲಿಕ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯ ಕೊಪ್ಪಳ, ಗಂಗಾವತಿ, ಯಲಬುರ್ಗಾ, ಕುಷ್ಟಗಿ, ಕನಕಗಿರಿ, ಕಾರಟಗಿ ಮತ್ತು ಕುಕನೂರು ತಾಲ್ಲೂಕುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆ, ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜು, ಮೌಲಾನಾ ಆಜಾದ್ ಮಾದರಿ ಶಾಲೆ ಹಾಗೂ ಮೌಲಾನಾ ಆಜಾದ್ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರು ಮತ್ತು ಶಿಕ್ಷಕರ ಹುದ್ದೆಗಳಿಗೆ ಎದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ತಾತ್ಕಾಲಿಕವಾಗಿ ಅತಿಥಿ ಉಪನ್ಯಾಸಕರು ಹಾಗೂ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗುತ್ತಿದ್ದು, ಆಸಕ್ತ ಅಭ್ಯರ್ಥಿಗಳು ವೆಬ್‌ಸೈಟ್ https://dom.karnataka.gov.in ನಲ್ಲಿ ಅಥವಾ ಶಾಲೆ, ಕಾಲೇಜುಗಳಿಗೆ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಮಾಹಿತಿ ಕೇಂದ್ರ ಹಾಗೂ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಭೇಟಿ ನೀಡಿ ಅರ್ಜಿ ಪಡೆದು ಭರ್ತಿ ಮಾಡಿ ಅಗತ್ಯ ದಾಖಲಾತಿಗಳನ್ನು ಲಗತ್ತಿಸಿ,

ಕೊಪ್ಪಳ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಕಛೇರಿ ವೇಳೆಯಲ್ಲಿ ಅರ್ಜಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಹತ್ತಿರ ವಸತಿ ಶಾಲೆ, ಕಾಲೇಜು ಅಥವಾ ಮೌಲಾನಾ ಆಜಾದ್ ಶಾಲೆ, ಕಾಲೇಜುಗಳಿಗೆ ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಮಾಹಿತಿ ಕೇಂದ್ರ ಮತ್ತು ಕೊಪ್ಪಳ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಮೌಲಾನಾ ಆಜಾದ್ ಭವನದ ದೂರವಾಣಿ ಸಂಖ್ಯೆ: 08539–225070, ಕುಷ್ಟಗಿ ಮತ್ತು ಕೊಪ್ಪಳ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರದ ಮೊ.ನಂ. 9738467445, ಗಂಗಾವತಿ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ದೂರವಾಣಿ ಸಂಖ್ಯೆ: 9740346533, ಯಲಬುರ್ಗಾ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರ ಮೊ.ನಂ. 9611419830ಗೆ ಸಂಪರ್ಕಿಸುವಂತೆ ಕೊಪ್ಪಳ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭಾರತೀಯ ವೀರ ಸೈನಿಕರಿಗೆ ಮತ್ತಷ್ಟು ಶಕ್ತಿ, ಆತ್ಮ ಸ್ಥೈರ್ಯ ಪ್ರಾಪ್ತಿಯಾಗಲು ಬಿಜೆಪಿಯಿಂದ ವಿಶೇಷ ಪೂಜೆ



**ವಿಜಯಪುರ :** ಪಹಲ್ಗಾಮ್ ದಾಳಿಗೆ ಪ್ರತ್ಯುತ್ತರವಾಗಿ ಭಾರತೀಯ ಸೇನೆ ಪಾಕಿಸ್ತಾದ ಉಗ್ರರ ನೆಲೆಗಳ ಮೇಲೆ ನಡೆಸಿದ ಆಪರೇಷನ್ ಸಿಂಧೂರ ಯಶಸ್ವಿಯಾಗಿ ನಡೆಸುತ್ತಿರುವ ನಮ್ಮ ಭಾರತೀಯ ವೀರ ಸೈನಿಕರಿಗೆ ಮತ್ತುಷ್ಟು ಶಕ್ತಿ, ಆತ್ಮ ಸ್ಥೈರ್ಯ ಪ್ರಾಪ್ತಿಯಾಗಲೆಂದು ವಿಜಯಪುರ ನಗರದ ಆರಾಧ್ಯದೈವ ಶ್ರೀ ಸಿದ್ಧೇಶ್ವರ ದೇವಸ್ಥಾನದಲ್ಲಿ ವಿಜಯಪುರ ಜಿಲ್ಲಾ ಬಿಜೆಪಿ ಘಟಕದಿಂದ ಸಂಸದ ರಮೇಶ ಜಿಗಜಿಣಗಿ ಅವರ ನೇತೃತ್ವದಲ್ಲಿ ವಿಶೇಷ ಪೂಜೆ ಪುನಸ್ಕಾರ ಸಲ್ಲಿಸಿ ಪ್ರಾರ್ಥಿಸಲಾಯಿತು. ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾ ಅಧ್ಯಕ್ಷ ಗುರಲಿಂಗಪ್ಪ ಅಂಗಡಿ ಅವರು ಮಾತನಾಡಿ, ಭಾರತ ದೇಶದ ಮೇಲೆ ನಿರಂತರವಾಗಿ ಭಯೋತ್ಪಾದನೆ ಚಟುವಟಿಕೆ ನಡೆಸುತ್ತಿರುವ ನೆರೆಯ ರಾಷ್ಟ್ರ ಪಾಕಿಸ್ತಾನದ ಯಾವುದೇ ಭಯೋತ್ಪಾದಕರು ಇನ್ನೊಮ್ಮೆಭಾರತದಕಡೆತಲೆಹಾಕದಂತೆನಮ್ಮಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ನಮ್ಮ ಸೈನಿಕರು ಆಪರೇಶನ್ ಸಿಂಧೂರ ನಡೆಸುವ ಮೂಲಕ ಶತ್ರು ರಾಷ್ಟ್ರಕ್ಕೆ ತಕ್ಕ ಪಾಠವನ್ನು ಕಲಿಸುತ್ತಿದ್ದಾರೆ. ಕೇಂದ್ರ ಸರ್ಕಾರ ದೇಶದ ಭದ್ರತೆಗಾಗಿ ತೆಗೆದುಕೊಳ್ಳುವ ಎಲ್ಲ ನಿರ್ಧಾರಗಳೊಂದಿಗೆ ಭಾರತೀಯರಾದ ನಾವು ಜೊತೆಗೆ ನಿಲ್ಲುತ್ತೇವೆ ಎಂದರು.

ಈ ಸಂದರ್ಭದಲ್ಲಿ ಸಂಸದ ರಮೇಶ ಜಿಗಜಿಣಗಿ, ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ವಿಧಾನ ಪರಿಷತ್ ಮಾಜಿ ಸದಸ್ಯ ಅರುಣ ಶಾಹಪೂರ, ಬಿಜೆಪಿ ಮುಖಂಡರಾದ ವಿಜುಗೌಡ ಪಾಟೀಲ, ಚಂದ್ರಶೇಖರ ಕವಟಗಿ, ಮಳುಗೌಡ ಪಾಟೀಲ, ಸಾಬು ಮಾಶ್ಯಾಳ, ಮಲ್ಲಿಕಾರ್ಜುನ ಜೋಗೂರ, ಚಿದಾನಂದ ಚಲವಾದಿ, ಉಮೇಶ ಕೋಳಕೂರ, ಸಂಜಯ ಪಾಟೀಲ ಕನಮಡಿ, ಭೀಮಾಶಂಕರ ಹದನೂರ, ಪಾಲಿಕೆ ಸದಸ್ಯರಾದ ಶಿವರುದ್ರ ಬಾಗಲಕೋಟ, ವಿಜಯ ಜೋಶಿ, ರಾಜಕುಮಾರ ಸಗಾಯಿ, ಭೀಮಸಿಂಗ್ ರಾಠೋಡ, ಶ್ರೀಹರ್ಷಗೌಡ ಪಾಟೀಲ, ಮಂಜುನಾಥ ಮೀಸೆ, ಕಾಂತು ಶಿಂಧೆ, ಸುಮಂಗಲಾ ಕೋಟಿ, ರಾಜೇಶ ತವಸೆ, ಸಂದೀಪ ಪಾಟೀಲ, ಜಗದೀಶ ಮುಚ್ಚಂಡಿ, ಸಂತೋಷ ಭೋವಿ, ಉದಯ ಕನ್ನೊಳ್ಳಿ, ಪಾಪುಸಿಂಗ್ ರಜಪೂತ, ಸಂತೋಷ ನಿಂಬರಗಿ, ರಾಜು ವಾಲಿ, ಉಮೇಶ ವೀರಕರ, ಕಲ್ಮೇಶ ಹಿರೇಮಠ, ಡಿ.ಜಿ. ಬಿರಾದಾರ, ಸಂತೋಷ ಜಾಧವ, ಬಸು ಹಳ್ಳಿ, ಚಿನ್ನು ಚಿನಗುಂಡಿ, ರಾಜಶೇಖರ ಡೊಳ್ಳಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

# ಐಟಿಐ ಪ್ರವೇಶಕ್ಕೆ ಅರ್ಜಿ ಸಲ್ಲಿಕೆ ಆರಂಭ



**ಇಂಡಿ :** ಪಟ್ಟಣದ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2025 ನೇ ಶೈಕ್ಷಣಿಕ ಸಾಲಿನ ಪ್ರವೇಶಕ್ಕಾಗಿ ಆನ್ ಲೈನ್ ಮೂಲಕ ಅರ್ಜಿ ಕರೆಯಲಾಗಿದೆ. ಆನ್ ಲೈನ್ ಮೂಲಕ ಅರ್ಜಿ ಸಲ್ಲಿಕೆಯು ದಿ: 09–05–2025 ರಿಂದ ಆರಂಭವಾಗಿ ದಿ: 28–05–2025 ರವರೆಗೆ ಅವಕಾಶ ಇರುತ್ತದೆ. ಈ ತರಬೇತಿ ಸಂಸ್ಥೆಯಲ್ಲಿ ಫಿಟ್ಟರ್–2 ವರ್ಷ, ಎಲೆಕ್ಟ್ರಿಶಿಯನ್–2 ವರ್ಷ, ಮೆಕ್ಯಾನಿಕ್ ಎಲೆಕ್ಟ್ರಿಕ್ ವೆಹಿಕಲ್–2 ವರ್ಷ, ಸಿ ಎನ್ ಸಿ ಮಶಿನಿಂಗ್ ಟೆಕ್ನಿಶಿಯನ್–2 ವರ್ಷದ ಕೋರ್ಸ್ ಗಳು ಲಭ್ಯವಿದ್ದು, 10 ನೇ ತರಗತಿ ಪಾಸಾದ ವಿದ್ಯಾರ್ಥಿಗಳು www.cite.karnataka.gov.in ಈ ವೆಬ್ ಸೈಟ್ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಪ್ರಾಚಾರ್ಯ ಪಿ ವೈ ರಜನಿಕರ (8073341505) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಹಾರಾಣಾ ಪ್ರತಾಪಸಿಂಹರ ಧೀರತನ ನಮ್ಮಲ್ಲಿ ಬರಲಿ: ಕೆಸರಟ್ಟಿಶ್ರೀ



**ತಾಳಿಕೋಟೆ :** ದೇಶ ಪ್ರೇಮ ತ್ಯಾಗ ಬಲಿದಾನ ಸಂಘರ್ಷ ಮುಂತಾದ ಗುಣಗಳಿಗೆ ಪ್ರತಿರೂಪವಾಗಿರುವ ಮಹಾ ರಾಣಾಪ್ರತಾಪಸಿಂಹ ಅವರು ಭಾರತೀಯರಿಗೆ ಶ್ರದ್ದೆ ಮತ್ತು ಅಭಿಮಾನದ ವಿಷಯವಾಗಿದ್ದಾರೆಂದು ಕೆಸರಟ್ಟಿಯ ಶ್ರೀ ಶಂಕರಲಿಂಗ ಮಠದ ಪೀಠಾಧಿಪತಿಗಳಾದ ಶ್ರೀ ಸೋಮಲಿಂಗ ಮಹಾಸ್ವಾಮಿಗಳು ನುಡಿದರು.

ಶುಕ್ರವಾರರಂದು ಸ್ಥಳೀಯ ರಜಪೂತ ಸಮಾಜದ ವತಿಯಿಂದ ಏರ್ಪಡಿಸಲಾದ ಮಹಾ ರಾಣಾಪ್ರತಾಪಸಿಂಹ ಅವರ ಮೂರ್ತಿ ಪ್ರತಿಷ್ಠಾಪನೆಯ ಕುರಿತು ನಡೆದ ಭವ್ಯ ಶೋಭಾಯಾತ್ರೆಗೆ ಚಾಲನೆ ನೀಡಿದ ನಂತರ ಪತ್ರಿಕೆಯೊಂದಿಗೆ ಮಾತನಾಡಿದ ಅವರು ರಾಣಾಪ್ರತಾಪಸಿಂಹ ಹೆಸರು ಹೇಳುತ್ತಲೇ ಮೊಘಲ ಸಾಮ್ರಾಜ್ಯದ ಪ್ರಭುತ್ವಕ್ಕೆ ಕರೆಕೊಡುವ ಶೌರ್ಯ ವೀರದ ಅಪ್ರತಿಮ ವೀರ ರಾಜನಾದ ಮಹಾರಾಣಾಪ್ರತಾಪಸಿಂಹ ಅವರ ಚಿತ್ರ ನಮ್ಮೆದರು ಅನಾಯಸವಾಗಿಯೇ ಮೂರ್ತಿ ರೂಪವನ್ನು ತಾಳಿ ನಿಲ್ಲುತ್ತದೆ ಎಂದರು. ಸ್ವಾತಂತ್ರ ?ಯಕ್ಕಾಗಿ ವಿಷಮ ಪರಸ್ಥಿತಿಗಳಲ್ಲಿಯೂ ಮಾಡಿದ ಸಂಘರ್ಷ ಇತಿಹಾಸ ಪುಟಗಳಲ್ಲಿ ಸುವರ್ಣ ಅಧ್ಯಾಯಗಳಾಗಿ ಪರಿಣಮಿಸಿವೆ ಇಂದು ಭಾರತದ ರಾಷ್ಟ್ರೀಯ ಪ್ರಜ್ಞೆ ಇನ್ನೂ ಹೆಚ್ಚಿಸಿಕೊಳ್ಳಬೇಕಾದರೆ ಮಹಾರಾಣಾ ಪ್ರತಾಪಸಿಂಹ ಅವರ ಜೀವನ ಚರಿತ್ರೆ ಆದರ್ಶಮಯವಾಗಿದ್ದು ಅವರ ಇತಿಹಾಸ ಓದುತ್ತಾ ಸಾಗಿದರೆ ಓದುಗರ ಮೈ ರೋಮಾಂಚನೆಗೊಳ್ಳಲಿದೆ ಎಂದು ಹೇಳಿದ ಶ್ರೀಗಳು ಅಂತಹ ಶೂರ,ದೀರ ಮಹಾರಾಜನ ಇತಿಹಾಸ ಇಂದಿನ ಹಾಗೂ ನಾಳಿನ ಪೀಳಿಗೆಗೆ ಅನುಕೂಲವಾಗಲೆಂಬ ಸದುದ್ದೇಶದಿಂದ ತಾಳಿಕೋಟೆಯ ರಜಪೂತ ಸಮಾಜ ಬಾಂದವರು ರಾಣಾಪ್ರತಾಪಸಿಂಹ ಅವರ ಜನ್ಮದಿನದಂದು ಮೂರ್ತಿ ಪ್ರತಿಷ್ಠಾಪನಾ ಕಾರ್ಯ ನೆರವೇರಿಸಲು ಮುಂದಾಗಿರುವದು ಆ ವಂಶಸ್ಥರಲ್ಲಿಯ ದೇಶ ಪ್ರೇಮ ಎಂತಹದ್ದಿದೆ ಎಂಬುದು ಎತ್ತಿ ತೋರಿಸುತ್ತದೆಎಂದುಮೂರ್ತಿಪ್ರತಿಷ್ಠಾಪನೆ ಕುರಿತು ಕೆಲ ಮಂತ್ರೋಪದೇಶದೊಂದಿಗೆ ಶುಭ ಕೋರಿದರು.

ಇನ್ನೋರ್ವ ಶ್ರೀಗಳಾದ ಗುಂಡಕನಾಳ ಬೃಹನ್ ಮಠದ ಶ್ರೀ ಷ.ಬ್ರ.ಗುರುಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ ತಾಳಿಕೋಟೆ ಪಟ್ಟಣದಲ್ಲಿ ಕ್ಷತ್ರೀಯ ವಂಶಸ್ಥರು ತಮ್ಮ ರಾಜ ಮಹಾರಾಜರ ಮೂರ್ತಿಗಳನ್ನು ಪ್ರತಿಷ್ಠಾಪಿಸಲು ಮುಂದಾಗಿರುವದು ಹೆಮ್ಮೆಯ ವಿಷಯವಾಗಿದೆ ಅದರಂತೆತಾಳಿಕೋಟೆರಜಪೂತಸಮಾಜದ ವತಿಯಿಂದ ಇಂದು ದೇಶಾಭಿಮಾನಿ ರಾಜನಾದ ಮಹಾರಾಣಾಪ್ರತಾಪಸಿಂಹ ಅವರ ಮೂರ್ತಿ ಪ್ರತಿಷ್ಠಾಪನೆಗೆ ಮುಂದಾಗಿರುವದು ಹೆಮ್ಮೆಯ ವಿಷಯವಾಗಿದೆ ಅವರಲ್ಲಿಯ ಆದರ್ಶ ಗುಣಗಳುಅವರಶೂರದೀರತನದಇತಿಹಾಸ ಇಂದಿನ ಪಿಳಿಗೆಗೆ ಅರೀತುಕೊಳ್ಳಲು ಇಂತಹ ಕಾರ್ಯಗಳಿಂದ ಅನುಕೂಲವಾಗಲಿದೆ ಮಹಾರಾಣಾಪ್ರತಾಪಸಿಂಹ ಅವರ ತಮ್ಮಲ್ಲಿದ್ದ ಚೇತಕ ಎಂಬ ಕುದುರೆಯೂ ಸಹ ತನ್ನಜೀವದಹಂಗುತೊರೆದುರಾಜನಜೀವಕ್ಕೆ ಜೀವಕೊಟ್ಟು ಅದೂ ಕೂಡಾ ಸ್ವಾಭಿಮಾನದ ಬಧುಕನ್ನು ತೋರಿಸಿಕೊಟ್ಟಿರುವದು ಇತಿಹಾಸ ಪುಟಗಳಲ್ಲಿ ಎತ್ತಿ ತೀರಿಸುತ್ತದೆ ಅಂತಹ ಮಹಾರಾಜನ ಮೂರ್ತಿ ಪ್ರತಿಷ್ಠಾಪನೆಗೆ ಮುಂದಾಗಿರುವದು ಹೆಮ್ಮೆಯ ವಿಷಯವಾಗಿದೆ ಎಂದು ಭವ್ಯ ಶೋಭಾಯಾತ್ರೆಗೆಶ್ರೀಗಳುಶುಭಕೋರಿದರು.

ಇನ್ನೋರ್ವ ರಜಪೂತ ಸಮಾಜದ ಯುವ ಮುಖಂಡ ವಿಜಯಸಿಂಗ್ ಹಜೇರಿ ಅವರು ಮಾತನಾಡಿ ತಾಳಿಕೋಟೆ ಪಟ್ಟಣದ ರಜಪೂತ ಸಮಾಜ ಹಾಗೂ ಸಮಾಜದ ಚೇತಕ ಯುವಕ ಸಂಘದ ನೇತೃತ್ವದಲ್ಲಿ ಈ ಮಹಾರಾಣಾಪ್ರತಾಪಸಿಂಹ ಅವರ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ಕೆ ಮುಂದಾಗಲಾಗಿದೆ ಸುಮಾರು 12 ಅಡಿ ಎತ್ತರದ ಈ ಅಶ್ವಾರೂಡ ಮಹಾಮೂರ್ತಿ 25 ಲಕ್ಷರೂ.ಪಂಚಲೋಹದಿಂದ ತಯಾರಿಸಿದ ಮೂರ್ತಿ ಇದಾಗಿದ್ದು ಯಾವ ಸರ್ಕಾರದ ಯಾವ ಸಂಘ ಸಂಸ್ಥೆಯ ಫಲಾಪೇಕ್ಷವಿಲ್ಲದೇ ಕೇವಲ ತಾಳಿಕೋಟೆಯ ರಜಪೂತ ಸಮಾಜದವರು ಸ್ವಖರ್ಚಿನೊಂದಿಗೆ ಮೂರ್ತಿ ಪ್ರತಿಷ್ಠಾಪನೆಗೆ ಮುಂದಾಗಿದ್ದೇವೆ ಮುಂದಿನ ದಿನಮಾನದಲ್ಲಿ ಇನ್ನೂ ಈ ಕಾರ್ಯಕ್ರಮ ಕುರಿತು ರಾಷ್ಟ್ರಮಟ್ಟದ, ರಾಜ್ಯಮಟ್ಟದ ನಾಯಕರನ್ನೂ ಸಹ ಅಹ್ವಾನಿಸಲಾಗುವುದೆಂದರು. ರಜಪೂತ ಗಲ್ಲಿಯಿಂದ ಶ್ರೀಗಳ ಅಮೃತ ಹಸ್ತದಿಂದ ಪ್ರಾರಂಭವಾದ ಭವ್ಯ ಶೋಭಾಯಾತ್ರೆಯು ವಿವಿಧ ವಾದ್ಯ ವೈಭವಗಳೊಂದಿಗೆ ಶ್ರೀ ಖಾಸ್ಗತೇಶ್ವರ ಮಠದ ರಸ್ತೆಗುಂಟಾ ಹಾಯ್ದು ಕತ್ರಿ ಬಜಾರ ಮಾರ್ಗವಾಗಿ ಸಮಾಜದ ಯುವಕರು ಹಾಗೂ ಇನ್ನೂಳಿದ ಅಭಿಮಾನಿ ಬಳಗದ ಯುವಕರ ತಂಡ ತಾಳಕ್ಕೆ ತಕ್ಕಂತೆ ಕುಣಿಯುತ್ತಾ ಮಹಾರಾಣಾಪ್ರತಾಪಸಿಂಹ ಅವರ ಹೆಸರಿನ ಜೈಘೋಷಣೆಗಳೊಂದಿಗೆ ಮುಂದುವರೆದ ಈ ಯಾತ್ರೆ ಬಾಲಾಜಿ ಮಂದಿರ ರಸ್ತೆ, ಶ್ರೀ ವಿಠ್ಠಲ ಮಂದಿರ ರಸ್ತೆ, ಶಿವಾಜಿ ಮಹಾರಾಜರ ವೃತ್ತದ ಮೂಲಕ ಮಹಾರಾಣಾಪ್ರತಾಪಸಿಂಹ ಸರ್ಕಲ್‌ಗೆ ತೆರಳಿ ನಿಗಧಿ ಪಡಿಸಿದ ಸ್ಥಳದಲ್ಲಿ ಮಹಾರಾಣಾಪ್ರತಾಪಸಿಂಹ ಮೂರ್ತಿಗೆ ಪ್ರಾಣ ಪ್ರತಿಷ್ಠಾಪನಾ ಪೂಜಾ ಕಾರ್ಯಕ್ರಮವು ಜರುಗಿತು.

ಈ ಪೂಜಾ ಕಾರ್ಯಕ್ರಮವನ್ನು ವೇ.ಭೀಮಾಶಂಕರ ಜೋಶಿ, ವೇ. ಗುಂಡಬಟ್ ಜೋಶಿ, ಅವರು ನಡೆಸಿಕೊಟ್ಟರು. ಇದೇ ಸಮಯದಲ್ಲಿ ಶ್ರೀ ಖಾಸ್ಗತೇಶ್ವರ ಮಠದ ಉಸ್ತುವಾರಿ ವೇ. ಮುರುಘೇಶ ವಿರಕ್ತಮಠ, ವೇ.ವೆಂಕಟೇಶ ಗ್ರಾಂಪೊರೊಹಿತ, ವಿಜಯಪುರ ರಜಪೂತ ಸಮಾಜದ ಅಧ್ಯಕ್ಷರಾದ ಪರಶುರಾಮಸಿಂಗ್ ರಜಪೂತ, ಉಪಾಧ್ಯಕ್ಷ ಪ್ರಕಾಶಸಿಂಗ್ ರಜಪೂತ, ಕಾರ್ಯದರ್ಶಿ ರಮೇಶಸಿಂಗ್ ಹಜೇರಿ,ರಾಜು ರಾಮಸಿಂಗ್ ಚವ್ಹಾಣ, ಹಾಗೂ ತಾಳಿಕೋಟೆಯ ರಜಪೂತ ಸಮಾಜದ ಅಧ್ಯಕ್ಷರಾದ ಹರಿಸಿಂಗ್ ಮೂಲಿಮನಿ, ಉಪಾಧ್ಯಕ್ಷ ರತನಸಿಂಗ್ ಕೊಕಟನೂರ, ಕಾರ್ಯದರ್ಶಿ ಗೋವಿಂದಸಿಂಗ್ ಮೂಲಿಮನಿ, ಅಮೀತಸಿಂಗ್ ಮೂಲಿಮನಿ, ವಿಠ್ಠಲಸಿಂಗ್ ಹಜೇರಿ, ಪ್ರಕಾಶ ಹಜೇರಿ, ವಿಜಯಸಿಂಗ್ ಹಜೇರಿ, ರಘುರಾಮಸಿಂಗ್ ಹಜೇರಿ, ಕೇಸರಸಿಂಗ್ ಹಜೇರಿ, ಭರತಸಿಂಗ್ ಹಜೇರಿ, ಸುರೇಶ ಹಜೇರಿ, ಅಮರಸಿಂಗ್ ಹಜೇರಿ, ನೀತಿನ ವಿಜಾಪೂರ, ಅರುಣ ದಡೇದ, ವಿಠ್ಠಲ ಬೇಕಿನಾಳ, ಹರಿಸಿಂಗ್ ಕೊಕಟನೂರ, ರಮೇಶ ಗೌಡಗೇರಿ, ಉಮರಸಿಂಗ್ ಗೌಡಗೇರಿ, ಪ್ರಲ್ಹಾದ ಹಜೇರಿ, ಸಂಜೀವಕುಮಾರ ಹಜೇರಿ, ಸಂತೋಷ ಹಜೇರಿ, ಸುದೀರ ಹಜೇರಿ, ಶಿರಸಕುಮಾರ ಹಜೇರಿ, ಗೋವಿಂದಸಿಂಗ್ ಹಜೇರಿ(ಪಿಂಟು), ರಾಘವೇಂದ್ರ ದೇವಿ(ಹಜೇರಿ), ಸುರಜ ಹಜೇರಿ, ದೀಲಿಪಸಿಂಗ್ ಹಜೇರಿ, ಅಮರಸಿಂಗ್ ನರಗುಂದ,ವಿಜಯಸಿಂಗ್ ದೇವಿ,ರಾಹುಲ್ ಮೂಲಿಮನಿ, ಜೈಸಿಂಗ್ ಮೂಲಿಮನಿ, ಕೇಸರಸಿಂಗ್ ದೇವಿ,ಇವರನ್ನೊಳಗೊಂಡು ದೇವಣಗಾಂವ, ಮುದ್ನೂರ, ಮನಗೂಳಿ, ಮುದ್ದೇಬಿಹಾಳ, ವಿಜಯಪುರ, ಗದಗ, ಶಾಬಾದ, ಮೊದಲಾದ ಗ್ರಾಮ ಪಟ್ಟಣಗಳ ಸಮಾಜ ಬಾಂದವರು ಹಾಗೂ ತಾಳಿಕೋಟೆ ರಜಪೂತ ಸಮಾಜದ ಮಹಿಳಾ ಮಂಡಳದ ಪದಾಧಿಕಾರಿಗಳು, ಸದಸ್ಯರು, ಹಾಗೂ ಹಿಂದೂ ಸಮಾಜ ಬಾಂದವರು ಪಾಲ್ಗೊಂಡಿದ್ದರು.

# ಹಿರೇಹೊಳಿಗೆ ಶಿಕ್ಷಣ ರತ್ನಸಿರಿ ಪ್ರಶಸ್ತಿ ಪ್ರದಾನ



**ತಾಳಿಕೋಟೆ :** ಶ್ರೀ ವಿರಕ್ತೇಶ್ವರ ಭರತನಾಟ್ಯ ತರಭೇತಿ ಸಂಸ್ಥೆಯ 6ನೇ ವಾರ್ಷಿಕೋತ್ಸವ ಅಂಗವಾಗಿ ಕೊಡಮಾಡಲಾದ ಶಿಕ್ಷಣ ರತ್ನ ಸಿರಿ ರಾಜ್ಯ ಪ್ರಶಸ್ತಿಯನ್ನು ಶ್ರೀ ಸಂಗಮೇಶ್ವರ ಪ್ರೌಢ ಶಾಲೆಯ ಶಿಕ್ಷಕ ಬಿ.ಆಯ್.ಹಿರೇಹೊಳಿ ಅವರಿಗೆ ನೀಡಿ ಗೌರವಿಸಲಾಗಿದೆ. ತಾಳಿಕೋಟೆಯ ಶ್ರೀ ವಿಠ್ಠಲ ಮಂದಿರ ಸಭಾ ಭವನದಲ್ಲಿ ಜರುಗಿದ ಈ ಕಾರ್ಯಕ್ರಮದಲ್ಲಿ ನಾವದಗಿಯ ಶ್ರೀ ರಾಜೇಂದ್ರ ಒಡೆಯರ ಶಿವಾಚಾರ್ಯ ಮಹಾಸ್ವಾಮಿಗಳು, ತೊರವಿಯ ಶ್ರೀ ಅಭಿನವ ಮುರುಗೇಂದ್ರ ದೇವರು, ಶ್ರೀ ಮುದ್ನೂರ ಅಜ್ಜನವರು, ಪೂಜ್ಯ ಮಹಾದೇವಯ್ಯ ಶಾಸ್ತ್ರಿಗಳು, ರಮೇಶ ಯರಕ್ಯಾಳ, ಡಾ:ಪ್ರಭುಗೌಡ ಲಿಂಗದಳ್ಳಿ, ಸಿ.ಬಿ.ಅಸ್ಕಿ, ನಾನಾಗೌಡ ಪಾಟೀಲ, ಎಸ್.ಎಮ್.ಸಜ್ಜನ, ಹಿರಿಯ ಪತ್ರಕರ್ತರಾದ ಜಿ.ಟಿ.ಘೋರ್ಪಡೆ, ವಿರೇಶಗೌಡ ಬಾಗೇವಾಡಿ, ವಾಸುದೇವ ಹೆಬಸೂರ, ಜಯಸಿಂಗ್ ಮೂಲಿಮನಿ, ವಿನೋದ ಕುಮಾರ ಚಿಕ್ಕಮಠ, ಕಾಶೀನಾಥ ಕಾರಗನೂರ, ಮೊದಲಾದವರು ಇದ್ದರು.

# ಲೇಖನಿ ಖಡ್ಗವಾಗಲಿ ಹೇಡಿಗಳಾಗದಿರೋಣ



ನಾವು ಸಾಹಿತಿ ಕಲಾವಿದರು ನೇರವಾಗಿ ಯುದ್ಧಕ್ಕೆ ಹೋಗಲು ಸಾಧ್ಯವಿಲ್ಲ. ಆದರೆ ಭಾರತ ಸೇನೆಗೆ ನೈತಿಕ ಸ್ಥೈರ್ಯ ಧೈರ್ಯ ತುಂಬುವಂತಹ ರೀತಿಯಲ್ಲಿ ನಮ್ಮ ಭಾವನೆಗಳನ್ನು ವ್ಯಕ್ತಪಡಿಸುವುದಕ್ಕೆ ಯಾರ ಅಡ್ಡಿಯಿಲ್ಲ ಮತ್ತು ಅದು ನಾವೆಲ್ಲ ಈಗ ಮಾಡಲೇಬೇಕಾದ ಕೆಲಸ. ಸ್ವಲ್ಪದಿವಸ ಪ್ರೇಮಕವನ ಗಿವನ ಗೀಚುವುದನ್ನು ಬಿಡಿ. ನಿಮ್ಮ ಲೇಖನಿ ಖಡ್ಗಕ್ಕಿಂತ ಶಕ್ತಿಯುತವಾಗಿ ಹೊರಹೊಮ್ಮಲಿ. ನಿಮ್ಮ ಭಾವನೆಗಳನ್ನು ಹೊರಹಾಕಲಿಕ್ಕೂ ಯಾಕೆ ಹಿಂಜರಿಕೆ?

ಮಾತೆತ್ತಿದರೆ ಫ್ರೆಂಚ್ ಕ್ರಾಂತಿ , ರುಸ್ಸೋವಾಲ್ಟೇರ್ ಬಗ್ಗೆ ಮಾತಾಡುವ ಬುದ್ಧಿಜೀವಿಗಳು , ಪ್ರಾಧ್ಯಾಪಕರು ಈಗ ಯಾಕೆ ಮೌನ? ಸರಕಾರದ ಬಾಲಬಡುಕತನವನ್ನು ಬಿಡಿ. ಸರಕಾರಿ ಪ್ರಶಸ್ತಿ, ಸ್ಥಾನಮಾನಗಳಿಗಾಗಿ ಹೋರಾಡುವ ಬದಲು ಪಾಕ್ ವಿರುದ್ಧ ಹೋರಾಡುವ ಭಾರತೀಯ ಸೈನಿಕರ ಪರವಾಗಿ ಮತ್ತು ದೇಶದ ಒಳಗೆ ಇರುವ ದೇಶದ್ರೋಹಿಗಳ ವಿರುದ್ಧ ನಿಮ್ಮ ಲೇಖನಿ ಝಳಪಿಸಿ. ನಿರ್ಭೀತವಾಗಿ ನಿಮಗನಿಸಿದ್ದನ್ನು ಬರೆಯಿರಿ. ಸಾಹಿತಿ ಕಲಾವಿದರು ತಮ್ಮ ಸ್ವತಂತ್ರ ವ್ಯಕ್ತಿತ್ವ ಕಾದುಕೊಳ್ಳಬೇಕು. ಆತ್ಮಗೌರವ ಕಾದುಕೊಳ್ಳಬೇಕು. ಬಕೆಟ್ ಹಿಡಿಯುವ ಕೆಲಸಕ್ಕೆ ಹೋಗಬಾರದು. ಜನರಿಂದ ದೊರಕುವ ಮೆಚ್ಚುಗೆಯೇ ಬಹಳ ದೊಡ್ಡ ಪ್ರಶಸ್ತಿ, ಗೌರವ. ಅಷ್ಟು ಸಾಕು. ಸರಕಾರದ ಪ್ರಶಸ್ತಿಯಿಂದಲೇ ಯಾರೂ ದೊಡ್ಡವರೆನಿಸುವುದಿಲ್ಲ. ಹೊರಬನ್ನಿ ಆ ಗುಲಾಮಗಿರಿಯ ಮನಸ್ಥಿತಿಯಿಂದ.

**– ಎಲ್. ಎಸ್. ಶಾಸ್ತ್ರಿ**

# ಯಾವುದೇ ತಪ್ಪಾಗದಂತೆ ಒಳ ಮೀಸಲಾತಿ ಸಮೀಕ್ಷೆ ನಡೆಯಲಿ: ಹೂಗಾರ

**ತಾಳಿಕೋಟೆ :** ಪರಿಶಿಷ್ಠ ಜಾತಿ ಒಳ ಮಿಸಲಾತಿ ಸಮೀಕ್ಷೆ ಕಾರ್ಯ ಬಹಳ ಎಚ್ಚರದಿಂದ ಹಾಗೂ ಜಾಗೃತಿಯಿಂದ ಕೈಗೊಳ್ಳಿ ಸಮಿಕ್ಷಾ ಕಾರ್ಯದ ಸಮಯದಲ್ಲಿ ಯಾವುದೇ ತಪ್ಪಾಗದಂತೆ ಏಚ್ಚರ ವಹಿಸಬೇಕೆಂದು ತಾಲೂಕಾ ತಹಶಿಲ್ದಾರಶ್ರೀಮತಿಡಾ.ವಿನಯಾ ಹೂಗಾರ ಅವರು ಹೇಳಿದರು.



ತಹಶಿಲ್ದಾರ ಕಾರ್ಯಾಲಯದಲ್ಲಿ ನಡೆದ ನ್ಯಾಯಮೂರ್ತಿ ಎಚ್. ಎನ್.ನಾಗಮೋಹನದಾಸ್ ಏಕ ಸದಸ್ಯ ವಿಚಾರಣಾ ಆಯೋಗ (ಪರಶಿಷ್ಠ ಜಾತಿ ಒಳ ಮಿಸಲಾತಿ ವರ್ಗಿಕರಣ) ತಾಲೂಕಾ ಮಟ್ಟದ ಒಂದು ದಿನದ ತರಬೇತಿ ಕಾರ್ಯಾಗಾರದ ನಂತರ ಸಮಿಕ್ಷಾ ಕಾರ್ಯ ಕೈಗೊಳ್ಳುವವರಿಗೆ ಸಮಿಕ್ಷಾ ಕಿಟ್ ವಿತರಿಸಿ ಮಾತನಾಡಿದ ಅವರು ಈಗಾಗಲೇ ಒಳ ಮಿಸಲಾತಿಯ ಸಂಬಂದಿಸಿ ಸಮಿಕ್ಷಾ ಕಾರ್ಯದ ಕುರಿತು ತರಬೇತಿಯನ್ನು ನೀಡಲಾಗಿದೆ ಭಾರತ ಸಂವಿದಾನದ 341ನೇ ವಿಧಿಯ ಅಡಿಯಲ್ಲಿ ಕರ್ನಾಟಕ ರಾಜ್ಯದ ಪರಿಶಿಷ್ಠ ಜಾತಿಯ ಪಟ್ಟಿಯಲ್ಲಿ 101 ಜಾತಿಗಳನ್ನು ಗುರುತಿಸಲಾಗಿದೆ ಮಿಸಲಾತಿ ಸೌಲಭ್ಯಗಳು ಎಲ್ಲಾ ಸಮಾನ ಅವಕಾಶ ಕಲ್ಪಿಸಲು ಒಳ ಮೀಸಲಾತಿ ವರ್ಗಿಕರಣ ಸ್ಪಷ್ಟವಾಗಿ ಮಾಹಿತಿ ಒದಗಿಸಲು ಆಯೋಗವು ಸಮನ್ವಯ ಸಮಿತಿ ರಚಿಸಲಾಗಿದೆ ಈಗಾಗಲೇ ತಾಲೂಕಾ ಮಟ್ಟದಲ್ಲಿ ಎಲ್ಲ ತರಬೇತಿಯನ್ನು ನೀಡಲಾಗಿದ್ದು ಗಣತಿದಾರರು ಕಡ್ಡಾಯವಾಗಿ ಶಿಕ್ಷಕರನ್ನೇ ಆಯ್ಕೆ ಮಾಡಲಾಗಿದ್ದು ಗಣಿತಿದಾರರು ಪ್ರತಿ ಮನೆ ಮನೆಗೆ ಬೆಟ್ಟಿ ನೀಡಿ ಸಂಪೂರ್ಣ ಮತ್ತು ಸ್ಪಷ್ಟವಾದ ಮಾಹಿತಿ ಪಡೆದುಕೊಂಡು ಅತ್ಯಂತ ಏಚ್ಚರಿಕೆಯಿಂದ ಸಮಿಕ್ಷೆ ನಡೆಸಬೇಕೆಂದು ತಹಶಿಲ್ದಾರ ಡಾ.ವಿನಯಾ ಹೂಗಾರ ಅವರು ಹೇಳಿದರು.

**ಸಮಿಕ್ಷಾ ಸ್ಥಳಕ್ಕೆ ತಹಶಿಲ್ದಾರರ ಬೆಟ್ಟಿ ಪರಿಶೀಲನೆ :**

ಪರಶಿಷ್ಠ ಜಾತಿ ಒಳ ಮಿಸಲಾತಿ ಸಮಿಕ್ಷಾ ಕಾರ್ಯ ನಡೆಯುವ ಸ್ಥಳಗಳಿಗೆ ತಹಶಿಲ್ದಾರ ಡಾ.ವಿನಯಾ ಹೂಗಾರ ಅವರು ಮಂಗಳವಾರರಂದು ಬೆಟ್ಟಿ ನೀಡಿ ಪರಿಶೀಲನೆ ನಡೆಸಿದರು.

ಗಣತಿ ಕಾರ್ಯದ ಸಮಯದಲ್ಲಿ ಅಲ್ಲಿಯ ಜನರೊಂದಿಗೆ ಸಮನ್ವಯತೆ ಸಾದಿಸುದರಬಗ್ಗೆ ಹಾಗೂ ಗಣತಿ ಕಾರ್ಯದಲ್ಲಿ ಯಾವುದೇ ಲೋಪವಾಗದಂತೆ ಏಚ್ಚರ ವಹಿಸಲು ಸಮಿಕ್ಷಾ ಕಾರರಿಗೆ ತಿಳಿಸಿದರಲ್ಲದೇ ಪರಿಶಿಷ್ಠ ಜಾತಿ ಸಮುದಾಯದವರು ವಾಸಿಸುವ ಎಲ್ಲ ಬಡಾವಣೆಗಳಿಗೆ ಬೆಟ್ಟಿ ನೀಡಿದ ಅವರು ಗಣತಿ ಕಾರರಿಗೆ ಸರಿಯಾದ ಮಾಹಿತಿ ಒದಗಿಸುವ ಬಗ್ಗೆ ಜನರೊಂದಿಗೆ ಚರ್ಚಿಸಿ ತಿಳಿಸಿದರು.

ಈ ಸಮಯದಲ್ಲಿ ಪುರಸಭೆ ಮುಖ್ಯಾಧಿಕಾರಿ ಮೋಹನ್ ಜಾಧವ, ತಹಶಿಲ್ದಾರ ಕಾರ್ಯಾಲಯದ ಕಂದಾಯ ಅಧಿಕಾರಿ ಜಗದೀಶ ಜೈನಾಪೂರ, ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿಗಳಾದ ಎಸ್.ಎನ್. ಮಲ್ಲಾಡೆ, ಎಸ್.ಎಂ.ಕಲ್ಬುರ್ಗಿ,ಮಂಜುನಾಥ ನರ್ಸುಣಗಿ, ಎನ್.ವ್ಹಿ. ಕೋರಿ, ಎನ್.ಸಿ.ಗುಡಗುಂಟಿ, ಸಿ.ಆರ್.ಸಿ.ರಾಜು ವಿಜಾಪೂರ, ಮೊದಲಾದವರು ಇದ್ದರು.

# ಜೀವನದಲ್ಲಿ ಶಾಂತಿ, ನೆಮ್ಮದಿಯಿಂದ ಬದುಕು ಸಾಗಿಸಿ

**ಬೀದರ್ :** ಮನುಷ್ಯ ಜೀವನದಲ್ಲಿ ಶಾಂತಿ, ನೆಮದಿಯಿಂದ ಬದುಕು ಸಾಗಿಸಬೇಕು. ಆಸೆಗೆ ಕೊನೆಯಿಲ್ಲ ಎಂದು ಜಹೀರಾಬಾದ್ ತಾಲ್ಲೂಕಿನ ಮಲ್ಲಯ್ಯಗಿರಿ ಹಾಗೂ ಬಸವಕಲ್ಯಾಣ ಆಶ್ರಮದ ಪೀಠಾಧಿಪತಿ ಡಾ. ಬಸವಲಿಂಗ ಅವಧೂತರು ಸಲಹೆ ಮಾಡಿದರು.



ಭಾಲ್ಕಿ ತಾಲ್ಲೂಕಿನ ಬೀರಿ (ಕೆ) ಗ್ರಾಮದ ಶ್ರೀ ರಾಮಲಿಂಗೇಶ್ವರ ದೇವಸ್ಥಾನದ 12ನೇಅಖಂಡಸಪ್ತಾಹಕಾರ್ಯಕ್ರಮ ನಿಮಿತ್ಯ ಆಯೋಜಿಸಿದ್ದ ಪ್ರವಚನ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರುದಾಸೋಹಭಾವನೆಬೆಳೆಸಿಕೊಳ್ಳಬೇಕು, ಯಾರು ಕೂಡಾ ಯಾವುದೇ ಕೆಲಸ ತೋರಿಕೆಗಾಗಿ ಮಾಡಬೇಡಿ, ಸತ್ಯದ ನೆಲೆಯನ್ನು ಕಂಡುಕೊಂಡು ಜೀವನ ಸ್ವಾರ್ಥಕ ಮಾಡಿಕೊಳ್ಳಿ ಎಂದು ಹೇಳಿದರು

ಬಸವಾದಿ ಶರಣರು ನಡೆದಾಡಿದ ಭೂಮಿ ಇದಾಗಿದೆ. ಈ ನೆಲದಲ್ಲಿ ಜನಿಸಿದ ನಾವೆಲ್ಲರೂ ಧನ್ಯರು ಎಂದು ನುಡಿದರು. ಶರಣರು ರಚಿಸಿದ ವಚನ ಸಾಹಿತ್ಯ ಓದಿ ಸರಳ ಮಾರ್ಗಕಂಡುಕೊಳ್ಳಿ ಎಂದು ಸಲಹೆ ನೀಡಿದರು.

ನಾಮಗಳು ಬೇರೆ ಬೇರೆ ಇದ್ದರೂ, ದೇವರು ಒಬ್ಬನೇ ಇದ್ದಾನೆ. ದೇವರ ಕೃಪೆಗೆ ಪಾತ್ರರಾಗಲು ಪೂಜೆ, ಧ್ಯಾನ ಮಾಡಬೇಕು.ಸತ್ಕಾರ್ಯಗಳಲ್ಲಿತೊಡಗಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಯಾರೊಂದಿಗೂ ವೈಷಮ್ಯ ಬೆಳೆಸಿಕೊಳ್ಳಬಾರದು. ಪರಸ್ಪರ ಪ್ರೀತಿಯಿಂದ ಕುಟುಂಬದಲ್ಲಿ ಬಾಳಬೇಕು ಎಂದು ಸಲಹೆ ಮಾಡಿದರು.

ಕಾರ್ಯಕ್ರಮದ ಮೊದಲಿಗೆ ಶ್ರೀ ರಾಮಲಿಂಗೇಶ್ವರ ದೇವರಿಗೆ ಡಾ. ಬಸವಲಿಂಗ ಅವಧೂತರು ಪೂಜೆ ಸಲ್ಲಿಸಿದರು.

ಪ್ರಮುಖರಾದ ದೇವಸ್ಥಾನದ ಪೂಜಾರಿ ಅಮೃತಪ್ಪ ಸ್ವಾಮಿ, ದೇವಸ್ಥಾನದ ಅಧ್ಯಕ್ಷ ದತ್ತಾತ್ರಿ ಪಾಟೀಲ್, ಯುವ ಮುಖಂಡ ಶರಣಪ್ಪ ಪಾಟೀಲ್, ಗಂಗಶೆಟ್ಟೆಪ್ಪ ಖಾಜಾಪೂರೆ, ಆನಂದ ಬಿರಾದರ, ಧನರಾಜ ಮುರಾಳೆ,ಕಾಶೆಪ್ಪಪಟ್ನೆ,ತಾನಾಜಿ ಮದಕಟ್ಟೆ,ಧನರಾಜ ಹಣಮಶೆಟ್ಟೆ, ದೀಲಿಪ ಸ್ವಾಮಿ ಮೊದಲಾದವರು ಪಾಲ್ಗೊಂಡಿದ್ದರು.

# ಚಡಚಣದಲ್ಲಿ ಶರಣ ಹರಳಯ್ಯನವರ ಜಯಂತಿ ಅದ್ದೂರಿ ಆಚರಣೆ

**ಚಡಚಣ :** ಪ್ರತಿ ವರ್ಷದಂತೆ ಈ ವರ್ಷವು ಕೂಡಾ ಶುಕ್ರವಾರದಂದು ಶರಣ ಹರಳಯ್ಯನವರ ಜಯಂತಿ ಅದ್ದೂರಿಯಾಗಿ ನಡೆಸಲಾಯಿತು. ಚಡಚಣದ ವಿರಕ್ತ ಮಠದ ಶ್ರೀ ಮ.ನಿ.ಪ್ರ. ಷಡಕ್ಷರಿ ಮಹಾಸ್ವಾಮಿಗಳ ಸನ್ನಿಧಿಯಲ್ಲಿ ಶರಣ ಹರಳಯ್ಯನವರ ವೃತ್ತದಲ್ಲಿ ಶರಣ ಹರಳಯ್ಯನವರ ಫೋಟೊ ಪೂಜೆ ನೆರವೇರಿಸಿದರು.



ಸಂಕಲ್ಪವಾದಿ ಶರಣ ಹರಳಯ್ಯನವರು ಜನಿಸಿದ್ದು ಸಗರನಾಡಿನ ಶಿವಪುರ ಈಗಿನ ಸುರಪುರದವರು ದವನದ ಹುಣ್ಣಿಮೆಯದಿನ. ಇವರ ತಂದೆ ಮಹಾದೇವಯ್ಯ ತಾಯಿ ಹೊನ್ನಮ್ಮ ಕುಲದೈವ ಅರಳ ಲಿಂಗೇಶ್ವರನ ಆರಾಧ್ಯ ಭಕ್ತರಾಗಿದ್ದರು ಆದ್ದರಿಮದ ಅರಳಲಿಂಗ ಹೆಸರಿಟ್ಟರು ನಂತರ ಜನರ ಬಾಯಲ್ಲಿ ಹರಳಯ್ಯ ಎನಿಸಿಕೊಂಡನು. ಸಹೊದರಿ ಕರಿಯಮ್ಮ, ಹೆಂಡತಿ ಮೂದನುರಿನ ಕಲ್ಯಾಣಮ್ಮ, ಮಗನ ಹೆಸರು ಶೀಲವಂತ. ಬಾಲ್ಯದಲ್ಲಿ ಪಾಲಕರಿಂದ ಉತ್ತಮ ಸಂಸ್ಕಾರ ಪಡೆದವರು,ದಾಸೋಹ ಪ್ರೀಯರಾಗಿದ್ದರು, ಜಂಗಮರೆಂದರೆ ಇವರಿಗೆ ಪಂಚಪ್ರಾಣ ಇಂದಿಗೂ ಜಂಗಮರನ್ನು ಆರಾಧಿಸುತ್ತ ಬಂದಿರುವದು ಹೆಮ್ಮೆಯ ವಿಷಯ ಎಂದರು.

ಬಸವಣ್ಣನವರ ಆಜ್ಞೇಯಂತೆ ಇಷ್ಟಲಿಂಗ ಹಾರವನ್ನು ಧರಿಸಿದರು ದಿನನಿತ್ಯ ಕುಲ ಕಸಬು ಚಮ್ಮಾರಿಕೆ ಮಾಡುತ್ತ ಶಿವನನ್ನು ಸ್ಮರಿಸುತಿದ್ದರು ಅನುಭವ ಮಂಟಪದಲ್ಲಿ ಭಾಗಿಯಾಗಿ ಅನುಭವಪಡೆದರು, ಇಲ್ಲಿ ಎಲ್ಲಾ ಸಾಮಾಜಿಕ–ಆರ್ಥಿಕ ಹಿನ್ನೆಲೆಯ ಪುರುಷ ಮತ್ತು ಮಹಿಳೆಯರು ಆಧ್ಯಾತ್ಮಿಕ ಮತ್ತು ಪ್ರಾಪಂಚಿಕ ಪ್ರಶ್ನೆಗಳನ್ನು ಮುಕ್ತವಾಗಿ ಚರ್ಚಿಸಿದರು ಎಂದು ಶ್ರೀ ಮ.ನಿ.ಪ್ರ. ಷಡಕ್ಷರಿ ಮಹಾಸ್ವಾಮಿಗಳು ಹೇಳಿದರು.

ಬಸವಣ್ಣನವರಅನುಯಾಯಿಗಳಾದಶರಣ ಹರಳಯ್ಯನವರು 12 ನೇ ಶತಮಾನದಲ್ಲಿ ಕಲ್ಯಾಣದ ಕ್ರಾಂತಿಗೆ ಕಾರಣೀಭೂತರಾದರು. ಇವರು ತಮ್ಮ ಕಾಯಕದಿಂದ ಸಾಮಾಜಿಕ ಅರಿವು ಹರಡಿದರು, ಬಸವಣ್ಣನವರಿಗೆ ಮಾರುಹೋದ ಶರಣರಲ್ಲಿ ಇವರು ಒಬ್ಬರು ತಮ್ಮ ತೊಡೆಯ ಚರ್ಮದಿಂದಲೆ ಬಸವಣ್ಣನವರಿಗೆ ಪಾದುಕೆಗಳನ್ನು ಮಾಡಿಕೊಟ್ಟ ಮಹಾಮಹಿಮ ಎಂದರೆ ತಪ್ಪಾಗಲಾರದು. ಇದುವೆ ಮುಂದೆ ಮತಿಯ ಕ್ರಾಂತಿಗೆ ಕಾರಣವಾಯಿತು ಎಂದು ವಿವರವಾಗಿ ಶ್ರೀಗಳು ಹೇಳಿದರು.

ಇಂದಿಗು ತಮ್ಮ ತೊಡೆಯ ಚರ್ಮದಿಂದಲೆ ತಯಾರುಮಾಡಿದ ಪಾದರಕ್ಷೇಗಳನ್ನು ಕಲಬುರಗಿ ಜಿಲ್ಲೆಯ ಸೇಡಂ ತಾಲೂಕಿನ ಬಿಜನಳ್ಳಿ ಗ್ರಾಮದಲ್ಲಿ ಸುರಕ್ಷಿತವಾಗಿವೆ.ನೀರೂಪಣೆ ನಾಗರಾಜ ವಾಘಮೋರೆ,ವಂದನಾರ್ಪಣೆ ಸದಾಶಿವ ಕಟ್ಟಿಮನಿ.

ಈ ಸಂದರ್ಭದಲ್ಲಿ ಹರಳಯ್ಯ ಸಮಾಜದ ಅಧ್ಯಕ್ಷ ಮಲ್ಲು ಕಟ್ಟಿಮನಿ,ಪಟ್ಟಣ ಪಂಚಾಯತಿಯ ಅಧ್ಯಕ್ಷರ ಮಲ್ಲಿಕಾರ್ಜುನ ದೋತ್ರೆ, ಮತ್ತು ಉಪಾಧ್ಯಕ್ಷ ಇಲಾಹಿ ನದಾಫ, ಪಟ್ಟಣ ಪಂಚಾಯತಿಯ ನಾಮನಿರ್ದೇಶಕ ಸದಸ್ಯರಾದ ವಸಿಮ್ ಮುಲ್ಲಾ,ಶಿವಾಜಿ ಬಾಮಣಿ,ಲಕ್ಷ್ಮಣ ಹೊನ್ನಾಕಟ್ಟಿ, ಮಹಾದೇವ ವಾಘಮೋರೆ, ನಿಂಗಪ್ಪ ಕಟ್ಟಿಮನಿ,ರಾವುತಪ್ಪ ಹೊನ್ನಾಕಟ್ಟಿ, ಜಕ್ಕಪ್ಪ ವಾಘಮೋರೆ,ಬಸಪ್ಪ ಕಟ್ಟಿಮನಿ, ಚಂದ್ರಶೇಖರ ಕಟ್ಟಿಮನಿ, ಅಶೋಕ ಕಾಂಬಳೆ, ಲಕ್ಷ್ಮಣ ವಾಘಮೋರೆ, ಮಾಳಪ್ಪ ವಾಘಮೋರೆ,

ಬಸವಂತ ವಾಘಮೋರೆ, ಶ್ರೀಶೈಲ್ ವಾಘಮೋರೆ, ಭೀಮಾಶಂಕರ ವಾಘಮೋರೆ,ಮಲ್ಲಿಕಾರ್ಜುನವನಂಜಕರ, ಊರಿನ ಗಣ್ಯ ವ್ಯಕ್ತಿಗಳು ಎಲ್ಲ ಸಮಾಜ ಬಾಂಧವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯಶಸ್ವಿಯಾಗಿ ನೆರವೇರಿಸಿದರು.

# ಉದ್ಯಮಶೀಲರನ್ನು ಬೆಳೆಸುವುದರಲ್ಲಿ ನಿರ್ವಹಣಾ ಶಾಸ್ತ್ರ ಅಧ್ಯಯನದ ಪಾತ್ರ ಮುಖ್ಯ: ಡಾ. ಉತ್ತಮ ಕಿಣಂಗೆ

**ಬಾಗಲಕೋಟೆ :** ಉದ್ಯೋಗಾವಕಾಶಗಳ ಜೊತಗೆ ಉದ್ಯಮಶೀಲರನ್ನು ಬೆಳೆಸುವುದರಲ್ಲಿ ನಿರ್ವಹಣಾ ಶಾಸ್ತ್ರ ಅಧ್ಯಯನ ಪಾತ್ರ ಬಹಳ ಮುಖ್ಯವಾಗಿದೆ ಎಂದು ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಕೌಸಾಳಿ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜಮೆಂಟ್ ಸ್ಟಡೀಸ್‌ನ ಪ್ರಾಧ್ಯಾಪಕಾರದ ಡಾ. ಉತ್ತಮ ಕಿಣಂಗೆ ಹೇಳಿದರು.




ಬಿ.ವಿ.ವಿ ಸಂಘದ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ ಸ್ಟಡೀಸ್ ನಿಂದ ಶನಿವಾರ ಆಯೋಜಿಸಿದ ಬಿಮ್ಸ್ "ಕಲಾಪರ್ವ–2ಏ25" ಎಂಬ ಸಾಂಸ್ಕೃತಿಕ ಕಾರ್ಯಕ್ರಮವನ್ನು ಉಧ್ಘಾಟಿಸಿ ಮಾತನಾಡಿದರು.

ನಿರ್ವಹಣಾ ಶಾಸ್ತ್ರವನ್ನು ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಅನೇಕ ಕೌಶಲ್ಯಗಳು ಅವಶ್ಯವಾಗಿರುತ್ತವೆ. ಅವುಗಳಲ್ಲಿ ಉದ್ಯಮಶೀಲ ಕೌಶಲ್ಯ, ತಾಂತ್ರಿಕ ಕೌಶಲ್ಯ, ನಾಯಕತ್ವ ಕೌಶಲ್ಯಗಳು, ಸಂವಹನ ಕೌಶಲ್ಯಗಳು ಬಹುಮುಖ್ಯವಾಗಿವೆ. ನಿರ್ವಹಣಾ ಶಾಸ್ತ್ರವು ಕೇವಲಉದ್ಯೋಗಾವಕಾಶಗಳನ್ನುಒದಗಿಸದೇ, ಅದರ ಜೊತೆಗೆ ಉದ್ಯಮಶೀಲರನ್ನು ಬೆಳೆಸುವುದರಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತದೆ ಎಂದರು.

ಮಹಾವಿದ್ಯಾಲಯದ ನಿರ್ದೇಶಕರಾದ ಡಾ॥ ಪ್ರಕಾಶ್ ಕೆ. ವಡವಡಗಿರವರು ಅಧ್ಯಕ್ಷಯನ್ನು ವಹಿಸಿ ಮಾತನಾಡಿ ವಿದ್ಯಾರ್ಥಿಗಳಲ್ಲಿ ಸಂಘಟನಾತ್ಮಕವಾಗಿ ನಿರ್ವಹಣೆ ಕುರಿತು ಅನೇಕ ಸಲಹೆಗಳನ್ನು ನೀಡಿದರು.

ಹಾಗೂ ಡಾ॥ ಎಸ್.ಎಂ ಗಾಂವಕರ, ಪದನಿಮಿತ್ತ ಅಧಿಕಾರಿಗಳು, ಬಿ.ವಿ.ವಿ ಸಂಘ ಬಾಗಲಕೋಟೆ ರವರು ಗೌರವ ಅತಿಥಿಗಳಾಗಿ ಆಗಮಿಸಿದ್ದರು. ಈ ಕಾರ್ಯಕ್ರಮದಲ್ಲಿ ರಂಗೋಲಿ, ಫೇಸ್ ಪೇಂಟಿಂಗ್, ಗುಂಪು ಗಾಯನ, ಗುಂಪು ನೃತ್ಯ ಸ್ಪರ್ಧೆಗಳನ್ನು ಅಯೋಜಿಸಲಾಗಿದ್ದು. ಒಟ್ಟು 25 ಪದವಿ ಮಹಾವಿದ್ಯಾಲಯಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದು ಸುಮಾರು 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ತಮ್ಮ ಕೌಶಲ್ಯಗಳನ್ನು ಪ್ರದರ್ಶಿಸಿದರು.

ಕಾರ್ಯಕ್ರಮದಲ್ಲಿ ಆಯೋಜಿಸಲಾದ ವಿವಿಧ ಸ್ಪರ್ಧೆಗಳ ಮೌಲ್ಯಮಾಪಕರಾಗಿ ಶ್ರಧ್ಧಾ ಕಮತಗಿ, ಸತೀಶ್ ಹಿರೇಮಠ, ಪರಮೇಶ್ವರಿ ಮೆಲ್ನಾಡ, ನಮ್ರತಾ ಹಿರೇಮಠ್, ಮೇಘಾ ಗುಮಾಸ್ಥೆ, ಪದ್ಮಾ ಅಣ್ಣಿಗೇರಿ ಇದ್ದರು, ಅಭಿನವ್ ಮತ್ತು ನಿಖಿತಾ ಎಡಕೆರವರು ನಿರೂಪಿಸಿದರು, ಡಾ॥ ಅಮರೇಶ ಬಿ. ಚರಂತಿಮಠರವರು ಸ್ವಾಗತಿಸಿದರು, ಶ್ರೀಮತಿ ಶೃತಿ ಮ್ಯಾಗೇರಿರವರು ಪರಿಚಯಿಸಿದರು ಮತ್ತು ಕುಮಾರಿ. ಪ್ರಿಯಾಂಕ ಮಾಗಿರವರು ವಂದಿಸಿದರು.

# ಊರಮ್ಮ ದೇವಿಯ ಉತ್ಸವಕ್ಕಾಗಿ: ಎತ್ತಿನಬಂಡಿ ಓಟದ ಸ್ಪರ್ಧೆ

**ಕೂಡ್ಲಿಗಿ :** ಮೆ.22 ರಂದು ಅದ್ದೂರಿಯಾಗಿ ಪಟ್ಟಣದ ಶ್ರೀ ಊರಮ್ಮ ದೇವಿ ಉತ್ಸವವು ನಡೆಯುವುದರಿಂದ, ರೈತರಿಗಾಗಿ, ರೈತರಿಗೊಸ್ಕರ ಆಯೋಜಿಸಿರುವ ವರ್ಷಪೂರ್ತಿ ಉಳುಮೆಯಲ್ಲಿ ಪಾಲ್ಗೊಂಡು, ರೈತರಿಗೆ ಮುತ್ತುಗಳಾಗಿ ದುಡಿಯುವ ಎತ್ತುಗಳ ಬಂಡಿಯ ಸ್ಪರ್ಧೆಯನ್ನು ಮೇ.15 16ರಂದು ಎರಡು ದಿನಗಳು ಪಟ್ಟಣದ ಹೊರ ವಲಯ ಹೊಸಪೇಟೆ ರಸ್ತೆಗೆ ಹೋಗುವ ಮಾರ್ಗದಲ್ಲಿ ದಿ.ಗುಳಿಗಿ ನಾಗರಾಜರವರ ಜಮೀನಿನಲ್ಲಿ ಹಿರೇಮಠ ಸಂಸ್ಥಾನ ಕೂಡ್ಲಿಗಿಯ ಷ.ಬ್ರ. ಪ್ರಶಾಂತಸಾಗರ ಶಿವಾಚಾರ್ಯ ಸ್ವಾಮಿಗಳು ಸಾನಿಧ್ಯದಲ್ಲಿ ಹಾಗೂ ಶಾಸಕ ಡಾ. ಎನ್.ಟಿ. ಶ್ರೀನಿವಾಸ ಇವರು ಉದ್ಘಾಟಿಸಿಲಿದ್ದಾರೆ. ಸ್ಪರ್ಧೆಯಲ್ಲಿ ಭಾಗವಹಿಸುವವರು, 2500ರೂ. ಸಂದಾಯಮಾಡುವ ಮೂಲಕ, ಸ್ಪರ್ಧೆ ನಡೆಯಲಿರುವ ನಾಲ್ಕು ದಿನ ಮುನ್ನವೇ ನೋಂದಾಯಿಸಿಕೊಳ್ಳಬೇಕು. ನಿಂಬಂಧನೆಗಳು, ಷರತ್ತುಗಳು ಒಳಪಡುತ್ತವೆ. ಪ್ರಥಮ ಬಹುಮಾನ:1,00,101ರೂ. ದ್ವಿತೀಯ ಬಹುಮಾನ:50,101ರೂ. ತೃತೀಯ: 25,101ರೂ. ಹಾಗೂ ಸಮಾಧಾನಕರ ಬಹುಮಾನವಾಗಿ ಟ್ರೋಫಿ ನೀಡಲಾಗುವುದೆಂದು ಆಯೋಜಕರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮತ್ತು ನೋಂದಣಿಗಾಗಿ, ಕಾಯಿಕೆಡವ ಕರಿವೀರಪ್ಪ: 6361299759, ವೀರೇಶ:9743897203, ಕಾಯಿಕೆಡವ ವಿಂಋ ಕುಮಾರ:9663901772, 9980645763, ಪತ್ರೆಪ್ಪರ ವೀರೇಶ: 8296684011 ಇವರುಗಳನ್ನು ಸಂಪರ್ಕಿಸಬಹುದಾಗಿದೆ.

# ಜಿಲ್ಲಾ ಕನ್ನಡ ಜಾನಪದ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಡಾ. ಸಿದ್ದಪ್ಪ ಬಿದರಿ ಆಯ್ಕೆ



**ಬೀಳಗಿ :** ತಾಲೂಕಿನ ಅನಗವಾಡಿ ಗ್ರಾಮದಲ್ಲಿ ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕ ಹಾಗೂ ತಾಲೂಕು ಘಟಕಗಳ ಆಶ್ರಯದಲ್ಲಿ ಮೇ. 20 ರಂದು ಜರುಗಲಿರುವ ಬಾಗಲಕೋಟೆ ಜಿಲ್ಲಾ ದ್ವಿತೀಯ ಕನ್ನಡ ಜಾನಪದ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜಾನಪದ ಆಶುಕವಿ ಡಾ. ಸಿದ್ದಪ್ಪ ಬಿದರಿ ಅವರನ್ನು ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ನೇತೃತ್ವದಲ್ಲಿ ಸನ್ಮಾನಿಸಿ ಆಹ್ವಾನಿಸಲಾಯಿತು.

ಭಾವೈಕ್ಯತೆಗೆಹೆಸರಾದಅನಗವಾಡಿ ಗ್ರಾಮದ ಗುರು ಹಿರಿಯರೊಂದಿಗೆ ಕನ್ನಡ ಜಾನಪದ ಪರಿಷತ್ತಿನ ಜಿಲ್ಲಾ ಮತ್ತು ತಾಲೂಕು ಘಟಕಗಳ ಪದಾಧಿಕಾರಿಗಳು ಡಾ. ಸಿದ್ದಪ್ಪ ಬಿದರಿ ಅವರ ಮನೆಗೆ ತೆರಳಿ ಬಿದರಿ ದಂಪತಿಯನ್ನು ಸನ್ಮಾನಿಸುವ ಮೂಲಕ ಅಧಿಕೃತವಾಗಿ ಆಹ್ವಾನ ನೀಡಲಾಯಿತು.

ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ. ಎಂ. ಸಾವಕಾರ ಮಾತನಾಡಿ, ಬೀಳಗಿಯ ಹೆಮ್ಮೆಯಾಗಿರುವ ಜಾನಪದ ಆಶುಕವಿ ಸಿದ್ದಪ್ಪ ಬಿದರಿ ಅವರ ಸರ್ವಾಧ್ಯಕ್ಷತೆಯಲ್ಲಿ ನಡೆಯಲಿರುವ ಬಾಗಲಕೋಟೆ ಜಿಲ್ಲಾ ಎರಡನೇ ಕನ್ನಡ ಜಾನಪದ ಸಮ್ಮೇಳನವನ್ನು ಪಕ್ಷಾತೀತ, ಜಾತ್ಯತೀತ, ಧರ್ಮಾತೀತವಾಗಿ ಸಂಘಟಿಸಿ, ಯಶಸ್ವಿಗೊಳಿಸಲು ಅನಗವಾಡಿ ಗ್ರಾಮಸ್ಥರು ಶ್ರಮಿಸುತ್ತಿದ್ದಾರೆಂದು ಹೇಳಿದರು.

ಸಿದ್ದಪ್ಪ ಬಿದರಿ ಸಾರಸ್ವತ ಲೋಕಕ್ಕೆ ಹಲವು ಮೌಲಿಕ ಕೃತಿಗಳನ್ನು ಕೊಟ್ಟಿದ್ದು, ನೆಲಮೂಲ ಸಂಸ್ಕೃತಿಯಾಗಿರುವ ಜಾನಪದ ಸಂಸ್ಕೃತಿಯನ್ನುಉಳಿಸಿ,ಬೆಳೆಸಲು ನಾಡಿನಾದ್ಯಂತ ಶ್ರಮಿಸುತ್ತಿದ್ದು, ಶ್ರೀಯುತರ ಸಾಧನೆ ಗಮನಿಸಿ ಒಮ್ಮತದಿಂದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ಹೇಳಿದರು.

ಸಮ್ಮೇಳನದಸರ್ವಾಧ್ಯಕ್ಷತೆಯನ್ನು ಒಪ್ಪಿಕೊಂಡು ಸನ್ಮಾನ ಸ್ವೀಕರಿಸಿದ ಡಾ. ಸಿದ್ದಪ್ಪ ಬಿದರಿ ಕೃತಜ್ಞತಾ ಪೂರ್ವಕವಾಗಿ ಮಾತನಾಡಿ, ಸಮ್ಮೇಳನದ ಸರ್ವಾಧ್ಯಕ್ಷತೆ ನನಗೆ ಒಲಿದು ಬಂದಿರುವುದು ಸಂತಸ ತಂದಿದೆ.

ತೆರೆಯ ಮರೆಯ ನನ್ನ ಸಾಧನೆಗೆ ಈ ಗೌರವ ಸ್ಥಾನ ನೀಡಿದ್ದಕ್ಕಾಗಿ ಜಾನಪದ ಪರಿಷತ್ತಿನ ಅಧ್ಯಕ್ಷರಿಗೂ, ಸರ್ವ ಬಳಗಕ್ಕೂ ಋಣಿಯಾಗಿರುವೆ ಎಂದು ಹೇಳಿದರು.

ಕಜಾಪ ಜಿಲ್ಲಾ ಖಜಾಂಚಿ ಸುರೇಶ ವಸ್ತ್ರದ, ಜಿಲ್ಲಾ ಸಂಚಾಲಕ ನಿಂಗರಾಜ ಮಬ್ರುಮಕರ, ತಾಲೂಕಾಧ್ಯಕ್ಷ ಬಸವರಾಜ ದಾವಣಗೆರೆ, ಖಜಾಂಚಿ ಎಂ. ಬಿ. ತಾಂಬೋಳಿ, ಮಹಿಳಾ ಘಟಕದ ಅಧ್ಯಕ್ಷೆ ಎಚ್. ಬಿ. ಮಾಳಗೊಂಡ, ಎಂ. ಎಸ್. ಮಠಪತಿ,

ಬಿ. ಎಂ. ಸಾಹುಕಾರ, ಶಿವಾನಂದ ಹಿರೇಮಠ,ಆನಂದರಾವ ನಾಯ್ಕು, ಎಸ್. ಬಿ. ಯಾವಗಲ್ಮಠ, ಮಹೇಶ ಮಾದರ,ಪಿ.ಎಂ.ನದಾಫ,ಶಂಕರ ಡಬರಿ, ಬಿ. ಎಸ್. ಮಾಳಗೊಂಡ, ಲಕ್ಷ್ಮಣ ಬಂಡಿವಡ್ಡರ, ಜೆ. ಎಂ. ಬಂಧುಗೋಳ ಮತ್ತಿತರರು ಉಪಸ್ಥಿತರಿದ್ದರು.

# ಮೇಲ್ನೋಟದ ರೂಪಕ್ಕೆ ಮರುಳಾಗಬೇಡಿರಿ ಜ್ಞಾನೇಶ್ವರ ಮಹಾಸ್ವಾಮಿಗಳು

**ಹಳ್ಳೂರ :** ಮೇಲ್ನೋಟದ ರೂಪ ನೋಡುವುದಕ್ಕಿಂತ ಗುಣ ನೋಡಿ ಗೆಳೆತನ ಮಾಡಿದರೆ ಜೀವನ ಸರಳ ಧಾಭಾ ಊಟವನ್ನು ಸೇವಿಸಿದೆ ಮನೆ ಊಟ ಸೇವಿಸಿರಿ ದಾಂಬಿಕ ,ತೋರಿಕೆ ಭಕ್ತಿಗೆ ದೇವರು ಮೆಚ್ಚುವುದಿಲ್ಲ ನಿಜವಾದ ಭಕ್ತಿಗೆ ದೇವರು ಒಲೆಯುತ್ತಾನೆಂದು ನಾಗರಾಳ ಜ್ಞಾನೇಶ್ವರ ಮಹಾಸ್ವಾಮಿಗಳು ಹೇಳಿದರು.



ಅವರು ಗ್ರಾಮದ ಶ್ರೀ ಸಿದ್ಧಾರೂಢ ಮಠದಲ್ಲಿ ನಡೆದ ಸಿದ್ಧಾರೂಢ ಪರಮಾರ್ಥ ಮಹೋತ್ಸವದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ ಪಂಚ ಭೂತಗಳಿಂದ ಹುಟ್ಟಿದ ಶರೀರ ಪಾಪ ಕರ್ಮ ಮಾಡಿ ಕಷ್ಟ ಅನುಭವಿಸದೆ ಯಾರಿಗೂ ಕೇಡನ್ನು ಬಯಸದೆ ಪುಣ್ಯದ ಕಾರ್ಯ ಮಾಡಿ ಮಾನವ ಜನ್ಮ ಉದ್ಧಾರ ಮಾಡಿಕೊಳ್ಳಿರೆಂದು ಹೇಳಿದರು.

ಸಾನಿಧ್ಯ ವಹಿಸಿದ ಅನಂತಾನಂದ ಶರಣರು ಮಾತನಾಡಿ ಭಕ್ತಿ ಧ್ಯಾನ, ಧರ್ಮ ತುಂಬಿದ ಭಾರತ ಪುಣ್ಯ ಭೂಮಿಯಲ್ಲಿ ಹುಟ್ಟಿದ್ದು ಧನ್ಯರು ತಂದೆ ತಾಯಿ ನಾಡಿನ ಕೀರ್ತಿ ಬೆಳೆಸುವಂತ ಮಕ್ಕಳಿಗೇ ಜನ್ಮ ನೀಡಬೇಕು ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ ಸಿರಿ ಸಂಪತ್ತು ನಾಶವಾಗುವ ವಸ್ತು ಧ್ಯಾನ, ಭಕ್ತಿ ವಿದ್ಯೆ ನಿಜವಾದ ಸಂಪತ್ತುಭಕ್ತಿ ಧ್ಯಾನ ಸತ್ಯಧರ್ಮದ ದಾರಿಯಲ್ಲಿ ಸಾಗುವರಿಗೆ ದುಷ್ಟ ಶಕ್ತಿಗಳು ದುರಾಗುತ್ತವೆ ದೇವರು ಇಲ್ಲದ ಸ್ಥಳವಿಲ್ಲವೆಂದು ಹೇಳಿದರು.

ತಿಕೋಟಾ ಶಿವಾನಂದ ಮಹಾಸ್ವಾಮಿಗಳು ಪ್ರವಚನ ಹೇಳಿದರು.

ಡಾ ಎಂ ಬಿ ವಿಭೂತಿ ಅವರು ಪ್ರಾಸ್ತಾವಿಕವಾಗಿಮಾತನಾಡಿದರು. ಮುರಿಗೆಪ್ಪ ಮಾಲಗಾರ ಸ್ವಾಗತಿಸಿ ಸಿದ್ದು ದುರದುಂಡಿ ನಿರೂಪಿಸಿ ವಂದಿಸಿದರು.

# ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಡಿಪ್ಲೋಮಾ ಪ್ರವೇಶಾತಿ ಆರಂಭ

**ಹೊಸಪೇಟೆ :** 2025–26 ನೇ ಸಾಲಿನ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಡಿಪ್ಲೋಮಾ ಕೋರ್ಸ್ಗಳಿಗೆ ಪ್ರವೇಶಾತಿಗಳು ಆರಂಭವಾಗಿವೆ ಎಂದು ಹೂವಿನಹಡಗಲಿ ಕಾಲೇಜಿನ ಪ್ರಾಂಶುಪಾಲರು ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿ, ಪಿಯುಸಿ ಸೈನ್ಸ್, ಐಟಿಐ ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನೀಯರಿಂಗ್, ಸೈಬರ್ ಫಿಜಿಕಲ್ ಸಿಸ್ಟಮ್ ಮತ್ತು ಸೆಕ್ಯೂರಿಟಿ, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನೀಯರಿಂಗ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನೀಯರಿಂಗ್ ವಿಭಾಗಗಳು ಲಭ್ಯವಿದೆ. ಕಾಲೇಜಿನಲ್ಲಿ ನುರಿತ ಬೋಧಕ ಸಿಬ್ಬಂದಿಗಳು ಉತ್ತಮ ಗುಣಮಟ್ಟದ ಪ್ರಯೋಗಾಲಯ, ಗ್ರಂಥಾಲಯ ಸೇರಿದಂತೆ ಕ್ಯಾಂಪಸ್ ಇಂಟರ್‌ವ್ಯೂ ಸೌಲಭ್ಯ ಹೊಂದಿದೆ. ಆಸಕ್ತ ವಿದ್ಯಾರ್ಥಿಗಳು ಕಾಲೇಜಿಗೆ ಭೇಟಿ ನೀಡಿ ಪ್ರವೇಶಾತಿ ಅರ್ಜಿಗಳನ್ನು ಭರ್ತಿ ಮಾಡಬಹುದು. ಹೆಚ್ಚಿನ ಮಾಹಿತಿಗಾಗಿ ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಹೂವಿನಹಡಗಲಿ. ಮೊ. 9448721423, 8147316279, 9591219575, 9113273556 ಸಂಖ್ಯೆಗಳಿಗೆ ಕರೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618